ಮೇಲೆ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಎಲ್ಲೋ ಒಂದು ಕಡೆ ನನಗನ್ನಿಸಿರುವಂತೆ ಹೊಸದಾಗಿ ಆಯ್ಕೆಯಾಗಿ ಬಂದಂಥ ಅನೇಕ ಸದಸ್ಯರುಗಳಿಗೆ ಯಾವಾಗಲೂ ಮೊದಲಿನ ಸಾಲಿನಲ್ಲಿರುವವರೇ ಚರ್ಚೆಗೆ ಹೆಚ್ಚು ಅವಕಾಶವನ್ನು ತೆಗೆದುಕೊಂಡುಬಿಡುತ್ತಾರೆ ಎನ್ನುವ ಭಾವನೆ ನಮ್ಮ ಪಕ್ಷದ ಸದಸ್ಯರಿಗೆ ಮತ್ತು ಬೇರೆ ಸದಸ್ಯರಿಗೂ ಬಂದಿದೆ. ಅದಕ್ಕಾಗಿಯೇ ಬಹುಶಃ ಒಂದು ಹೊಸ ಪದ್ಧತಿಯೆಂದು ಆದರೂ ಪರವಾಗಿಲ್ಲ ವಿರೋಧ ಪಕ್ಷದ ನಾಯಕರು ಡಿಮ್ಯಾಂಡ್ ಮೇಲೆ ಚರ್ಚೆ ಪ್ರಾರಂಭ ಮಾಡಲಿಲ್ಲವೆಂದು ಹೇಳುವ ಒಂದು ಅಪವಾದಕ್ಕೆ ಗುರಿಯಾದರೂ ಪರವಾಗಿಲ್ಲವೆಂದೇ ತಿಳಿದು ನಾನು ನಿನ್ನೆ ಯೋಗಿಶ್‌ಭಟ್‌ರವರಿಂದ ಆ ಡಿಮ್ಯಾಂಡ್ ಬಗ್ಗೆ ಪ್ರಸ್ತಾಪ ಮಾಡಿಸಿದೆ. ಆದರೆ ಪತ್ರಿಕೆಯಲ್ಲಿ ಇವತ್ತು ಬಂದಿಲ್ಲ, ಬಹುಶಃ ನಾಳೆ ಬರಬಹುದು ಎಂದು ಕಾಣುತ್ತೆ, ಬಹಳಷ್ಟು ಉತ್ತಮ ವಿಷಯಗಳು ಅವರ ಭಾಷಣದಲ್ಲಿ ಇತ್ತು. ನಾನು ಇಷ್ಟೇ ಹೇಳುತ್ತೇನೆ, ಈ ಎಲ್ಲಾ ಡಿಮ್ಯಾಂಡ್‌ಗಳ ಮೇಲೆ ಹಿಂಭಾಗದಲ್ಲಿ ಕುಳಿತಿರುವಂಥ ಮಾನ್ಯ ಸದಸ್ಯರುಗಳೇ ಹೆಚ್ಚು ಮಾತನಾಡಲಿ, ಏಕೆಂದರೆ ಅವರು ಹೆಚ್ಚಾಗಿ ಕಲಿತುಕೊಳ್ಳುವ ನಿಟ್ಟಿನಲ್ಲಿ ಅವಕಾಶವಾಗುತ್ತದೆ, ಈ ನಿಟ್ಟಿನಲ್ಲಿ ಕೆಲವು ಕೊರತೆಗಳಾದರೂ ಪರವಾಗಿಲ್ಲವೆಂದು ಹೇಳಿಯೇ ನಮ್ಮ ಪಾರ್ಟಿಯಲ್ಲಿ ತೀರ್ಮಾನ ತೆಗೆದುಕೊಂಡು ಹಿಂದೆ ಕುಳಿತಿರುವಂಥ ಸದಸ್ಯರುಗಳೇ ಹೆಚ್ಚು ಮಾತನಾಡಲಿ ಎಂದು ಹೇಳಲಾಗಿದೆ. ಇದರಲ್ಲಿ ಕೆಲವು ಕೊರತೆಗಳು ಆಗಬಹುದು, ನಿರೀಕ್ಷೆಯಂತೆ ಆಗದೇ ಇದ್ದರೂ ಸಹ ಉಳಿದ ಸಂದರ್ಭದಲ್ಲಿ ಉಪಯೋಗ ಮಾಡಿಕೊಳ್ಳೋಣವೆಂದು ಹೇಳಿ ನಾನು ಆ ರೀತಿ ಹೇಳಿದ್ದೇನೆ.

ಅಧ್ಯಕ್ಷರು:- ತರಬೇತಿ ತೆಗೆದುಕೊಂಡ ಹಾಗೆ ಆಗುತ್ತದೆ ಬಿಡಿ, ನಿಮ್ಮ ಸಲಹೆ ಬಹಳ ಉತ್ತಮವಾಗಿದೆ. ಅವರು ಮಾತನಾಡುವಾಗ ಸ್ವಲ್ಪ ಹೆಚ್ಚು ಕಡಿಮೆ ಇದ್ದರೆ ಸರಿ ಮಾಡೋಣ ಬಿಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:- (ಅ) ಜುರಾಲ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ಚರ್ಚೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರಮುಖವಾದಂಥ ಈ ಜುರಾಲಾ ಅಣೆಕಟ್ಟು ಇವೊತ್ತು ಎತ್ತರ ಮಾಡಿರುವಂಥದ್ದರ ಬಗ್ಗೆ ಬಹುಶಃ ಮೊದಲ ಬಾರಿಗೆ ದಿನಾಂಕ 15-06-1995ಕ್ಕೆ ನಾನು ಸ್ಥಳಕ್ಕೆ ಅಧಿಕಾರಿಗಳ ಜೊತೆ ಭೇಟಿ ಕೊಟ್ಟಿದ್ದೆ. ಆ ಸಂದರ್ಭದಲ್ಲಿ 1978ರ ಬಚಾವತ್ ಆಯೋಗದ ಒಪ್ಪಂದದ ಪ್ರಕಾರ 17.84 ಟಿ.ಎಂ.ಸಿ.ಗಿಂತ ಹೆಚ್ಚು ನೀರನ್ನು ಸಂಗ್ರಹಣೆ ಮಾಡುವುದಕ್ಕೆ ಅವಕಾಶವಿಲ್ಲ. ಆಂಧ್ರಪ್ರದೇಶ ಸರ್ಕಾರ ಕೃಷ್ಣಾ ನದಿಗೆ ನಿರ್ಮಿಸುತ್ತಿರುವ ಜುರಾಲಾ ಅಣೆಕಟ್ಟು 318.576 ಮೀಟರ್ ಮಾತ್ರ ಇರಬೇಕು. ಈಗ ಅದು 321.510

ಇದೆಯೆಂದು ಗೊತ್ತಾಗಿದೆ. ನಾನು ಮತ್ತು ಡಾ: ತಂಗಾರವರು ಜುರಾಲಾ ಅಣೆಕಟ್ಟೆಗೆ ದಿನಾಂಕ 15-06-1995ಕ್ಕೆ ಹೋದಾಗ ಅಧಿಕಾರಿಗಳು ನಮ್ಮ ಜೊತೆ ಇದ್ದರು. ಬಹುಶಃ ಈ ರಾಜ್ಯದ ನೀರಾವರಿ ಇಲಾಖೆಗೆ, ಸರ್ಕಾರಕ್ಕೆ ಮತ್ತು ಜನರಿಗೆ ಮೊದಲು ಗೊತ್ತಾದಂಥದ್ದು, ನಾನು ಈ ಜುರಾಲಾ ಅಣೆಕಟ್ಟೆಗೆ ಭೇಟಿ ಕೊಟ್ಟು ಅಧಿಕಾರಿಗಳ ಜೊತೆ ಮಾತುಕತೆ ಆಡಿ ಇವೊತ್ತು ನಮ್ಮ ಒಪ್ಪಂದ ಮೀರಿ 3 ಮೀಟರ್ ಎತ್ತರಕ್ಕೆ ಅವರು ಏರಿಸಿದ್ದಾರೆ ಎನ್ನುವ ವಿಚಾರ ನನ್ನ ಗಮನಕ್ಕೆ ಬಂದು ಸರ್ಕಾರಕ್ಕೆ ಪತ್ರವನ್ನು ಬರೆದ ಮೇಲೆ ಇಂದಿನ ಮುಖ್ಯಮಂತ್ರಿಗಳು, ನೀರಾವರಿ ಇಲಾಖಾ ಅಧಿಕಾರಿಗಳ ಮತ್ತು ವಿರೋಧ ಪಕ್ಷದ ಮುಖಂಡರುಗಳ ಸಭೆಯನ್ನು ಕರೆದಿದ್ದರು. ಅಲ್ಲಿ ವ್ಯಾಪಕವಾದಂಥ ಚರ್ಚೆಯಾದಂಥ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಮತ್ತು ಆಂಧ್ರದ ಉನ್ನತ ಅಧಿಕಾರಿಗಳು ನಾವು ಜಾಯಿಂಟ್ ಇನ್ಸ್‌ಪೆಕ್‌ಶನ್ ಮಾಡಿ ವಾಸ್ತವಿಕ ಸತ್ಯ ಸಂಗತಿಯನ್ನು ತಿಳಿಸುತ್ತೇವೆಂದು ಹೇಳಿ ಒಪ್ಪಿಕೊಂಡರು. ಆದರೆ ಇದುವರೆಗೆ ಈ ಎರಡೂ ರಾಜ್ಯದ ಅಧಿಕಾರಿಗಳು ಅಲ್ಲಿ ಜಾಯಿಂಟ್ ಇನ್ಸ್‌ಪೆಕ್‌ಶನ್ ಮಾಡಿದ ಮೇಲೆ ವಾಸ್ತವಿಕವಾಗಿ ಎಷ್ಟು ಮೀಟರ್ ಎತ್ತರಕ್ಕೆ ಏರಿಸಿದ್ದಾರೆ ಎನ್ನುವಂಥ ಸತ್ಯ ಸಂಗತಿ ಇನ್ನೂ ಹೊರಗೆ ಬಂದಿಲ್ಲ. ನಾನು ಹೇಳುತ್ತೇನೆ 3 ಮೀಟರ್ ಜಾಸ್ತಿ ಮಾಡಿದ್ದಾರೆಂದು. ಕೇಂದ್ರದ ಮಂತ್ರಿಗಳು ಇಲಾಖೆಗೆ ಸಂಬಂಧಪಟ್ಟವರು ಆಗಿರುವವರು 2 ಮೀಟರ್ ಮಾತ್ರ ಏರಿಸಿದ್ದೇವೆ ಎಂದು ಒಪ್ಪಿಕೊಂಡಿದ್ದಾರೆ. ಸನ್ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಒಂದು ಇಂಚೂ ಕೂಡ ಜಾಸ್ತಿ ಮಾಡುವುದಕ್ಕೆ ನಾವು ಅವಕಾಶವನ್ನು ಮಾಡಿಕೊಡುವುದಿಲ್ಲವೆನ್ನುವ ಭರವಸೆಯನ್ನು ಅವರು ಕೊಟ್ಟಿದ್ದರು. ತಮಗೆ ಗೊತ್ತಿರುವಂತೆ ಈ ರಾಜ್ಯದಿಂದ 68 ಕಿ.ಮೀ ದೂರದಲ್ಲಿರುವ ಕೇವಳಪಳ್ಳಿಯಲ್ಲಿ ನಿರ್ಮಿಸುತ್ತಿರುವ ಈ ಜುರಾಲಾ ಅಣೆಕಟ್ಟೆಯ ಅಧಿಕೃತ ಉದ್ಘಾಟನೆ ಸಮಾರಂಭವನ್ನು ಜುಲೈ 25ನೇ ತಾರೀಖು ಆಂಧ್ರದ ಮುಖ್ಯಮಂತ್ರಿಗಳಾದ ಚಂದ್ರಬಾಬುನಾಯ್ಡುರವರು ನೆರವೇರಿಸುತ್ತಾರೆಂದು ಪತ್ರಿಕೆಯಲ್ಲಿ ಬಂದಿದೆ. ನನಗೆ ದುಃಖ ತರಿಸುವಂಥ ಸಂಗತಿಯೆಂದರೆ ಒಂದು ಕಡೆ ಆಲಮಟ್ಟಿ ಅಣೆಕಟ್ಟು, ಯೋಜನಾ ಆಯೋಗ 1990ರ ಸೆಪ್ಟೆಂಬರ್ ತಿಂಗಳಲ್ಲಿ ಅಣೆಕಟ್ಟಿನ ಎತ್ತರವನ್ನು 528 ಮೀಟರ್‌ಗೆ ಎತ್ತರಿಸಲು ಅನುಮತಿಯನ್ನು ಕೊಟ್ಟಿದೆ, ಈ ಬಚಾವತ್ ಆಯೋಗದ ಪ್ರಕಾರ ಕೇವಲ 534 ಟಿ.ಎಂ.ಸಿ. ನೀರನ್ನು ಮಾತ್ರ ಅಲ್ಲಿ ಸಂಗ್ರಹ ಮಾಡಿ ಇಟ್ಟುಕೊಳ್ಳಬೇಕು ಎಂದು ಇದೆ. ಆ ಯೋಜನಾ ಆಯೋಗದ ಒಪ್ಪಂದದ ಪ್ರಕಾರ ಆಲಮಟ್ಟಿ ಡ್ಯಾಮ್‌ನ್ನು 528 ಮೀಟರ್‌ಗೆ ಎತ್ತರಿಸಲು ವಿರೋಧ ಮಾಡುವಂಥದ್ದು, ಇನ್ನೊಂದು ಕಡೆ ಒಪ್ಪಂದಕ್ಕೆ ವಿರುದ್ಧವಾಗಿ ಜುರಾಲಾ ಅಣೆಕಟ್ಟನ್ನು 3 ಮೀಟರ್‌ಗಳು ಹೆಚ್ಚು ಎತ್ತರಿಸುವಂಥ ಪ್ರಯತ್ನ ಮಾಡುವಂಥದ್ದು. ಈ ಸಂದರ್ಭ ಬಂದಾಗ ದೇಶದ ಪ್ರಧಾನಿಯವರ ಮೇಲೆ ಒತ್ತಡವನ್ನು ತಂದು ಆಂಧ್ರದ ಅಸೆಂಬ್ಲಿಯೊಳಗೆ ಚರ್ಚೆ ಮಾಡಿ ಯಾವುದೇ ಕಾರಣಕ್ಕೆ ಈ ಆಲಮಟ್ಟಿ ಅಣೆಕಟ್ಟನ್ನು ಎತ್ತರ ಮಾಡುವುದಕ್ಕೆ ಬಿಡುವುದಿಲ್ಲವೆಂದು ಹೇಳಿ ಒತ್ತಾಯವನ್ನು ತರುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅಂದರೆ ಆಂಧ್ರ ಸರ್ಕಾರಕ್ಕೆ

ಒಂದು ಕಾನೂನು, ಕರ್ನಾಟಕ ಸರ್ಕಾರಕ್ಕೆ ಒಂದು ಕಾನೂನು. ಇವೊತ್ತು ನಾನು ಪ್ರಸ್ತಾಪ ಮಾಡುತ್ತಿರುವಂಥ ಸಂಗತಿ ಏನೆಂದರೆ ಈ ಜುರಾಲಾ ಅಣೆಕಟ್ಟೆಯನ್ನು ಒಂದು ಒಪ್ಪಂದದ ಪ್ರಕಾರ ಎಷ್ಟು ಅಡಿ ಕಟ್ಟಬೇಕು ಎಂದು ನಿಶ್ಚಯ ಆದಮೇಲೆ ಅಂದರೆ 318.576 ಇರಬೇಕೆಂದು ನಿಶ್ಚಯ ಆದಮೇಲೆ ಅದನ್ನು ಇನ್ನೂ ಎತ್ತರಕ್ಕೆ ಕಟ್ಟುವುದಕ್ಕೆ ಅಧಿಕಾರಿಗಳು ಹೇಗೆ ಅವಕಾಶ ಮಾಡಿಕೊಟ್ಟರು. ನಾನು 15-06-95ರಲ್ಲಿ ಸ್ಥಳ ಪರಿಶೀಲನೆಯನ್ನು ಮಾಡಿ ಬರುವವರೆಗೆ ಈ ಬಗ್ಗೆ ಅಧಿಕಾರಿಗಳು ಏಕೆ ಕೈ ಕಟ್ಟಿಕೊಂಡು ಕುಳಿತಿದ್ದರು ಮತ್ತು ಸರ್ಕಾರ ಏಕೆ ಕೈ ಕಟ್ಟಿಕೊಂಡು ಕುಳಿತಿತ್ತು. ಅಂದರೆ ಇದರಲ್ಲಿ ಇವೊತ್ತು ಬಹಳ ಸ್ಪಷ್ಟವಾಗಿ ಅರ್ಥವಾಗುವುದೆಂದರೆ ಅದು ಕಾವೇರಿ ಬೇಸಿನ್‌ನಲ್ಲಿರಬಹುದು, ಕೃಷ್ಣಾ ಬೇಸಿನ್‌ನಲ್ಲಿರಬಹುದು, ನಮ್ಮ ಸರ್ಕಾರ ಸರಿಯಾದಂಥ ಕಾಳಜಿಯನ್ನು ತೆಗೆದುಕೊಳ್ಳದೇ ಇರುವಂಥದ್ದರ ಪರಿಣಾಮ ನಮ್ಮ ಅಧಿಕಾರಿಗಳೇ ಪಕ್ಕದ ರಾಜ್ಯದ ಆಂಧ್ರದ ಅಧಿಕಾರಿಗಳ ಜೊತೆ ಶಾಮೀಲಾಗಿ ಇವೊತ್ತು ರಾಜ್ಯದ ಜನರಿಗೆ ಅನ್ಯಾಯ ಮಾಡುತ್ತಿರುವಂಥ ಮತ್ತು ದ್ರೋಹ ಮಾಡುತ್ತಿರುವಂಥ ಅನೇಕ ಉದಾಹರಣೆಗಳು ನನಗೆ ಕಾಣುತ್ತಿವೆ. ಇದರಿಂದ ಇವೊತ್ತು ರಾಯಚೂರು ಜಿಲ್ಲೆಯ ಮೇಲೆ ಅಗಾಧವಾದಂಥ ದುಷ್ಪರಿಣಾಮ ಆಗುವುದರಲ್ಲಿದೆ. ಅಲ್ಲಿರುವಂಥ ಪವಿತ್ರ ಪುಣ್ಯ ಕ್ಷೇತ್ರಗಳಾದ ನಾರದಗುಡ್ಡೆ, ಹುರುಮಗಡೆ, ದತ್ತಾತ್ರೇಯ ಪುಣ್ಯಕ್ಷೇತ್ರವಾಗಿದ್ದು, ನಾರದಗುಡ್ಡೆಯೂ ಕೂಡ ಪುಣ್ಯ ಕ್ಷೇತ್ರವಾಗಿದ್ದು ಅಲ್ಲಿ ನಾರದ ಮುನಿಗಳು ತಪಸ್ಸು ಮಾಡಿದ ಕ್ಷೇತ್ರ. ಅವುಗಳು ಮುಳುಗಿಹೋಗುವಂಥ ಪರಿಸ್ಥಿತಿ ಇವೊತ್ತು ಅಲ್ಲಿ ಕಾಣುತ್ತಿದೆ. ನಾನು ಸ್ಥಳಕ್ಕೆ ಹೋದಂಥ ಸಂದರ್ಭದಲ್ಲಿ ಮತ್ತು ಇಲ್ಲಿ ಚರ್ಚೆ ಆದಂಥ ಸಂದರ್ಭದಲ್ಲಿ ಸರ್ಕಾರ ಒಂದು ಭರವಸೆಯನ್ನು ಕೊಟ್ಟಿದ್ದು, ಆಂಧ್ರ ಸರ್ಕಾರದವರು ಇದಕ್ಕೆ ಒಂದು ಪರಿಹಾರವನ್ನು ಕೊಡುವವರಿದ್ದಾರೆ, ಆದರೆ ನಾವು ಕಾಯುವುದಿಲ್ಲ, ನಮ್ಮ ಸರ್ಕಾರದ ಖರ್ಚಿನಲ್ಲಿಯೇ ನಾವು ಇವೊತ್ತು ಅಲ್ಲಿ ಅಡ್ಡಗೋಡೆಯನ್ನು ಕಟ್ಟುವಂಥದ್ದು, ಸೇತುವೆಯನ್ನು ಕಟ್ಟುವಂಥದ್ದು, ಮುಳುಗಡೆಯಾಗುವಂಥ ಪ್ರದೇಶದ ರೈತರಿಗೆ ನೆರವು ಕೊಡುವಂಥದ್ದು ಮತ್ತೀ ಪವಿತ್ರ ಪುಣ್ಯ ಕ್ಷೇತ್ರಗಳನ್ನು ಉಳಿಸಿಕೊಳ್ಳುವಂಥ ಕೆಲಸಗಳನ್ನು ನಾವು ಮಾಡುತ್ತೇವೆ ಎಂದು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟರು. ನಾನು ನೀರಾವರಿ ಸಚಿವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಇವೊತ್ತು ಇದನ್ನು ಮಾಡುವುದಕ್ಕೆ ಸಾಧ್ಯವಾಗಿದೆಯೇ, ಕೆಲಸ ಪ್ರಾರಂಭ ಆಗಿದೆಯೇ? ಅಲ್ಲಿರುವಂಥ ರೈತರಿಗೆ ಪರಿಹಾರವನ್ನು ಕೊಡುವುದಕ್ಕೆ ಆಂಧ್ರ ಸರ್ಕಾರ ಎಷ್ಟು ಹಣವನ್ನು ಕೊಟ್ಟಿದೆ? ಈ ಎರಡೂ ಪುಣ್ಯ ಕ್ಷೇತ್ರಗಳನ್ನು ಉಳಿಸಿಕೊಳ್ಳುವುದಕ್ಕೆ ಈ ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದೀರಲ್ಲಾ ಆ ಕೆಲಸಗಳು ಪ್ರಾರಂಭ ಆಗಿದೆಯೇ ಎಂಬುದನ್ನು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಬಹುಶಃ ನೀರಾವರಿ ಸಚಿವರು ಗಮನಿಸಿದರು ಎಂದು ಕಾಣುತ್ತದೆ. ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಂತೆ ಎರಡೂ ರಾಜ್ಯದ ಉನ್ನತ ಅಧಿಕಾರಿಗಳು ಭೇಟಿ ಕೊಟ್ಟಿದ್ದರು. ಇವೊತ್ತು ಲೋಕಸಭೆಗೆ ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಿದ್ದಾರೆ. ಕೇವಲ 2 ಅಡಿಗಳಷ್ಟು ಎತ್ತರ

ಮಾಡಲಾಗಿದೆ ಎಂದು, ನಾನು ಅಧಿಕಾರಗಳ ಜೊತೆ ಸ್ಥಳಕ್ಕೆ ಭೇಟಿ ಕೊಟ್ಟು ಪ್ರತ್ಯಕ್ಷವಾಗಿ ನೋಡಿ ಹೇಳುತ್ತಿದ್ದೇನೆ, ಸುಮಾರು 3 ಅಡಿಗಳಷ್ಟು ಜಾಸ್ತಿಯಾಗಿದೆ. ಈ ಜಾಯಿಂಟ್ ಇನ್ಸ್‌ಪೆಕ್ಷನ್ ಮಾಡಿದ ಮೇಲೆ ವಾಸ್ತವಿಕ ಎಷ್ಟು ಅಡಿ ಜಾಸ್ತಿಯನ್ನು ಮಾಡಿದ್ದಾರೆ. ಇಷ್ಟು ಜಾಸ್ತಿ ಅಡಿ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಅಧಿಕಾರಿಗಳು ಯಾರು? ಸರ್ಕಾರ ಏಕೆ ಕೈ ಕಟ್ಟಿಕೊಂಡು ಕುಳಿತಿತ್ತು? ಆ ರೀತಿಯಲ್ಲಿ ಶಾಮೀಲು ಆಗಿರುವವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಎರಡನೆಯದಾಗಿ ಇವೊತ್ತು ಸುಮಾರು 3 ಮೀಟರ್ ಎತ್ತರವನ್ನು ಮಾಡಿರುವುದರ ಪರಿಣಾಮವಾಗಿ ನೀವು ಏನು 550 ಅಥವಾ 570 ಎಕರೆ ಪ್ರದೇಶದಷ್ಟು ಮಾತ್ರ ಮುಳುಗಡೆ ಆಗುತ್ತದೆ ಎಂದು ಹೇಳುತ್ತೀರೋ ಅದು ನನ್ನ ಒಂದು ಅಂದಾಜಿನ ಪ್ರಕಾರ ಎರಡೂವರೆ ಅಥವಾ ಮೂರು ಸಾವಿರ ಎಕರೆಗಳಿಗೂ ಹೆಚ್ಚು ದಾಟುತ್ತದೆ. ಇವೊತ್ತು ರೈತರಿಗೆ ಸರಿಯಾದ ರೀತಿಯಲ್ಲಿ ಪರಿಹಾರವನ್ನು ಕೊಡುತ್ತೀರೋ ಎಂದು ನಾನು ಒತ್ತಾಯ ಮಾಡುತ್ತೇನೆ. ಯಾವ ಕಾರಣಕ್ಕೂ ಸಹ ನಿಶ್ಚಿತವಾದಂಥ ಎತ್ತರಕ್ಕಿಂತ ಒಂದಿಂಚೂ ಕೂಡ ಜಾಸ್ತಿಯಾಗದಂತೆ ತಾವು ಗಮನವನ್ನು ತೆಗೆದುಕೊಳ್ಳಬೇಕು.

ಶ್ರೀ ಸಿ.ಹೆಚ್.ವಿಜಯಶಂಕರ್:- ಮಾನ್ಯ ಉಪಾಧಕ್ಷರೇ, ಕಾವೇರಿ ನೀರಿನ ವಿಚಾರದಲ್ಲಿ ಚರ್ಚೆ ಆಗುವಂತಹ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಸದನದ ಮನವಿ ಇತ್ತು. ನೀರಾವರಿ ಯೋಜನೆಗೆ ಸಂಬಂಧಪಟ್ಟಂತಹ ಗಂಭೀರವಾದಂತಹ ವಿಚಾರಗಳು ಈ ಸದನದಲ್ಲಿ ಚರ್ಚೆ ಆಗುವಂತಹ ಸಮಯದಲ್ಲಿ ಮುಖ್ಯ ಕಾರ್ಯದರ್ಶಿಗಳು ಮತ್ತು ನೀರಾವರಿ ಕಾರ್ಯದರ್ಶಿಗಳು ಕಡ್ಡಾಯವಾಗಿ ಈ ಸದನದಲ್ಲಿ ಇರಬೇಕು ಎನ್ನುವಂತಹ ವಿಚಾರ ಪ್ರಸ್ತಾವವಾಗಿತ್ತು. ನಾನು ಈ ಸಮಯದಲ್ಲಿ ಮತ್ತೇ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಇಷ್ಟೊಂದು ಗಂಭೀರವಾದಂತಹ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿರುವಂತಹ ಸಂದರ್ಭದಲ್ಲಿ ನೀರಾವರಿ ಕಾರ್ಯದರ್ಶಿಗಳು ಮತ್ತು ಮುಖ್ಯ ಕಾರ್ಯದರ್ಶಿಗಳು ಏನಾದರೂ ಈ ಸದನದಲ್ಲಿ ಇರುವಂತಹ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎನ್ನುವುದನ್ನು ದಯವಿಟ್ಟು ಸ್ಪಷ್ಟಪಡಿಸಬೇಕು.

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಮೇಲಿನ ಮನೆಯಲ್ಲಿ 4-5 ಪ್ರಶ್ನೆಗಳಿದ್ದವು. ಅಲ್ಲಿಂದ ಬರುತ್ತಿದ್ದಾರೆ, ಈಗ ತಾನೇ ಬಂದರು, ಇನ್ನು ಮುಖ್ಯ ಕಾರ್ಯದರ್ಶಿಗಳನ್ನು ಬರುವುದಕ್ಕೆ ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೇ, ಇವತ್ತು ಆಂಧ್ರ ಸರ್ಕಾರ ಕೃಷ್ಣಾ ನದಿಗೆ ನಿರ್ಮಿಸುತ್ತಿರುವಂತಹ ಜುರಾಲ ಅಣೆಕಟ್ಟಿನ ಎತ್ತರ, ಒಪ್ಪಂದದ ಪ್ರಕಾರ ನಾನು ಹೇಳಿದಂತೆ, 318.576 ಮೀಟರ್ ಬದಲಿಗೆ 321.510 ಮೀಟರ್ಗೆ ಎಂದರೆ 300 ಮೀಟರ್ ಹೆಚ್ಚಳವಾಗಿದೆ. ಒಂದು ರೀತಿಯಲ್ಲಿ ಕೇಂದ್ರ ಜಲ ಆಯೋಗ ಏನಿದೆ ಜುರಾಲ ಅಣೆಕಟ್ಟೆನಲ್ಲಿ ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿನ ನೀರನ್ನು ಸಂಗ್ರಹಿಸಲು ಆಂಧ್ರಕ್ಕೆ

ಅನುಮತಿ ನೀಡಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ಮಧ್ಯ ಈ ಜುರಾಲ ವಿದ್ಯುತ್ ಯೋಜನೆ ಸಂಬಂಧವಾಗಿರತಕ್ಕಂಥ ಒಂದು ಒಪ್ಪಂದವನ್ನು ಉಲ್ಲಂಘನೆಮಾಡಿದ ಹಾಗೆ ಆಗಿದೆ ಎಂದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯ. ಕರ್ನಾಟಕದ ಪಾಲಿನ ಕೃಷ್ಣಾ ನದಿ ನೀರನ್ನು ಕಬಳಿಸುವಂತಹ ಸಂಚು ಆಂಧ್ರ ಸರ್ಕಾರ ಏನು ಮಾಡುತ್ತಿದೆ ಈ ಬಗ್ಗೆ ವಿಶೇಷವಾದಂತಹ ಗಮನವನ್ನು ಸರ್ಕಾರ ಹರಿಸಬೇಕು. ಚುನಾವಣೆ ಮುಂದೆ ಸನ್ಮಾನ್ಯ ನೀರಾವರಿ ಸಚಿವರೇ ನಾನು ಹೇಳಿದ್ದೆ, ಕೇವಲ ಈ ಲೋಕಸಭಾ ಚುನಾವಣೆಯ ಒಂದು ಹಿನ್ನೆಲೆಯಲ್ಲಿ ರಾಷ್ಟ್ರೀಯ ರಂಗಕ್ಕೆ ಆಂಧ್ರ ತೆಲುಗು ದೇಶಂನ ಆ ಬಣದ ಮುಖ್ಯಮಂತ್ರಿಗಳಾದ ಚಂದ್ರಬಾಬು ನಾಯ್ಡು ಅವರ ಒಂದು ಬೆಂಬಲವನ್ನು ಪಡೆಯುವುದಕ್ಕೋಸ್ಕರ ನಮ್ಮ ರಾಜ್ಯದ ಹಿತವನ್ನು ಈ ಸರ್ಕಾರ ಬಲಿ ಕೊಟ್ಟಿತು ಎನ್ನುವಂತಹ ಮಾತು ಇವತ್ತು ಆ ಭಾಗದಲ್ಲಿ ನಾವು ಕೇಳುತ್ತಿದ್ದೇವೆ. ಇವತ್ತು ಒಂದು ರೀತಿಯಲ್ಲಿ ಇಕ್ಕಟ್ಟಿನಲ್ಲಿ ಸಿಕ್ಕಿರುವಂತಹ ಸಂದರ್ಭದಲ್ಲಿ ನನಗೆ ದುಃಖ ತರುವಂತಹ ಸಂಗತಿ ಏನೆಂದರೆ ಈ ರಾಜ್ಯದ ಮುಖ್ಯಮಂತ್ರಿಯಾಗಿ ಈಗ ಪ್ರಧಾನಿಗಳಾಗಿರತಕ್ಕಂಥ ಸನ್ಮಾನ್ಯ ದೇವೇಗೌಡರು ಇಲ್ಲಿ ಭರವಸೆಯನ್ನು ಕೊಟ್ಟಿದ್ದರು. ಅದೇನೆಂದರೆ ಒಂದು ಇಂಚು ಸಹ ನಿಗದಿತವಾಗಿರುವಂತಹ ಎತ್ತರಕ್ಕಿಂತ ಹೆಚ್ಚು ಎತ್ತರ ಮಾಡುವುದಕ್ಕೆ ಬಿಡುವುದಿಲ್ಲ ಎನ್ನುವ ಮಾತನ್ನು ಈ ಸದನದಲ್ಲಿ ಹೇಳಿದ್ದರು. ಇವತ್ತು ಆಂಧ್ರದ ಮುಖ್ಯಮಂತ್ರಿಗಳ ಒತ್ತಾಯಕ್ಕೆ ಮಣಿದು ಸಂಬಂಧಪಟ್ಟ ಎರಡು ರಾಜ್ಯದ ಅಧಿಕಾರಿಗಳ ಒಂದು ಸಭೆಯನ್ನು ಕರೆಯುವಂತಹ ಮಾತೂ ಸಹ ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಆ ರೀತಿ ಏನಾದರೂ ಸೂಚನೆ ಬಂದಿದೆಯೇ? ಒಪ್ಪಂದದ ಪ್ರಕಾರ ಜುರಾಲ ಅಣೆಕಟ್ಟನ್ನು ಕಟ್ಟುವಂತಹ ಕಾಲದಲ್ಲಿ ನಾವು ಒಪ್ಪಂದವನ್ನು ಯಾವುದೇ ರೀತಿಯಲ್ಲಿ ಉಲ್ಲಂಘನೆ ಮಾಡದೇ ಇರುವಾಗ ಎರಡು ರಾಜ್ಯಗಳ ಅಧಿಕಾರಿಗಳ ಸಭೆಯನ್ನು ಕರೆಯುವಂಥಾದ್ದು, ಮಧ್ಯಸ್ಥಿಕೆ ವಹಿಸುವಂಥಾದ್ದು ಇಲ್ಲಿ ಏನು ಅಗತ್ಯ ಇದೆ ಎನ್ನುವಂತಾದ್ದು ಪ್ರಶ್ನೆ ಏಳುತ್ತದೆ. ಇದು ಅನಗತ್ಯವಾಗಿ ಜನರಲ್ಲಿ ಸಂಶಯ ಮೂಡುವಂತಾಗಿದೆ. ಆವತ್ತು ಲೋಕಸಭಾ ಚುನಾವಣೆಯಲ್ಲಿ ಆಂಧ್ರದ ತೆಲುಗುದೇಶಂ ಬೆಂಬಲ ಬೇಕಾಗಿತ್ತು, ಅದಕ್ಕೆ ಮನಸೋಲುವಂಥಾದ್ದು, ಈಗ ಅವರ ಬೆಂಬಲ ಸಿಕ್ಕಿ, ಅಧಿಕಾರ ನಡೆಸುತ್ತಿರುವಂತಹ ಕೇಂದ್ರ ಸರ್ಕಾರ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಏನಾದರೂ ಒಂದು ಒಳಒಪ್ಪಂದಕ್ಕೆ ತಾವು ಬರುವುದಾದರೆ ಕರ್ನಾಟಕದ ಜನ ಕನ್ನಡಿಗರು ತಮ್ಮನ್ನು ಕ್ಷಮಿಸುವುದಿಲ್ಲ. ಸನ್ಮಾನ್ಯ ನಾಗೇಗೌಡರು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ, ಯಾವ ಕಾರಣಕ್ಕೂ ಸಹ ಇವತ್ತು ಜುರಾಲ ಅಣೆಕಟ್ಟೆಯ ಎತ್ತರವನ್ನು ಒಪ್ಪಂದಕ್ಕಿಂತ ಜಾಸ್ತಿ ಆಗುವುದಕ್ಕೆ ಬಿಡುವುದಿಲ್ಲ ಎನ್ನುವ ಭರವಸೆಯನ್ನು ತಾವು ಕೊಟ್ಟಿದ್ದೀರಿ. ಆ ಒಂದು ಮಾತನ್ನು ಉಳಿಸಿಕೊಳ್ಳುತ್ತೀರೋ? ಆ ದಿಕ್ಕಿನಲ್ಲಿ ತಾವು ಪ್ರಾಮಾಣಿಕವಾದ ಒಂದು ಪ್ರಯತ್ನವನ್ನು ಮಾಡುತ್ತೀರೋ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಜುರಾಲ ಅಣೆಕಟ್ಟಿನ ಎತ್ತರ ಆಗಿರುವುದು ದೃಢ ಪಟ್ಟಿರುವುದರಿಂದ 1978ರ ಒಪ್ಪಂದದ ಸ್ಪಷ್ಟ ಉಲ್ಲಂಘನೆ ಆಗಿರುವುದರಿಂದ ಈ ಪೂರ್ಣ ಯೋಜನೆ ಒಂದು ಮರು ಸರ್ವೇ

ಕೈಗೊಳ್ಳಲು ಆಗ್ರಹವನ್ನು ನಾನು ಮಾಡುತ್ತಿದ್ದೇನೆ. ಈ ಒಪ್ಪಂದದ ಉಲ್ಲಂಘನೆಯಾಗಿದ್ದರೆ ಸರ್ಕಾರ ಅದಕ್ಕೆ ದಂಡ ತೆರುವಂತಹ ಅದಕ್ಕೆ ಪೀನಲ್ ಕ್ಲಾಸ್‌ನ್ನು ಹಾಕಬೇಕಾಗುತ್ತದೆ. ಈ ಬಚಾವತ್ ಆಯೋಗದ ವರದಿ ಅನುಷ್ಠಾನದ ಶರತ್ತಿನಂತೆ ಆಂಧ್ರಕ್ಕೆ 17.84 ಟಿಎಂಸಿಗಿಂತ ಹೆಚ್ಚು ನೀರು ಸಂಗ್ರಹಣೆ ಮಾಡುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ಕೊಡಬಾರದು ಎನ್ನುವ ಶರತ್ತನ್ನು ಸಹ ನಾವು ವಿಧಿಸಬೇಕಾಗಿದೆ. ಮತ್ತು ಉತ್ಪಾದನೆಯಾಗುವಂತಹ ವಿದ್ಯುತ್‌ನಲ್ಲಿ ಕರ್ನಾಟಕದ ಪಾಲನ್ನು ಗಣನೀಯವಾಗಿ ಹೆಚ್ಚಿಸಿಕೊಳ್ಳುವುದಕ್ಕೆ ತಾವು ಏನು ಕಾರ್ಯಕ್ರಮ ರೂಪಿಸಿದ್ದೀರಿ ಎನ್ನುವುದನ್ನು ಸಹ ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಈ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಯಾರು ಕಲ್ಯೂಡ್ ಆಗಿ ಇದನ್ನು ಎತ್ತರ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಅವರ ಮೇಲೆ ಸಹ ವಿಶೇಷವಾಗಿ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತೇ ಪೂರ್ಣ ಸರ್ವೇ ಆಗುವವರೆಗೆ ಇವತ್ತು ಏನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಇದೇ ತಿಂಗಳ 25ನೇ ದಿನಾಂಕದಂದು ಒಂದು ಪ್ರಾಜೆಕ್ಟ್‌ನ ಉದ್ಘಾಟನೆ ಮಾಡುವುದಕ್ಕೆ ಹೋಗುತ್ತಿದ್ದಾರೆ, ನಾನು ಹೇಳುತ್ತೇನೆ, ಇವತ್ತು ಒಂದು ವರ್ಷದ ಮಟ್ಟಿಗೆ ತಾತ್ಕಾಲಿಕವಾಗಿ ಏನು ಅಗತ್ಯಕ್ಕಿಂತ ಹೆಚ್ಚು ನೀರನ್ನು ಅಲ್ಲಿ ನಿಲ್ಲಿಸುವುದಕ್ಕೆ ಬಿಡುವುದಿಲ್ಲ ಹಾಗೂ ಪವಿತ್ರ ಕ್ಷೇತ್ರಗಳು ಮುಳುಗಡೆಯಾಗುವುದಕ್ಕೆ ಬಿಡುವುದಿಲ್ಲ ನಂತರ ಬೇಕಾದರೆ ನೀವು ಕೆಲಸ ಮಾಡಿಕೊಳ್ಳಿ ಎಂದು ಹೇಳಬಹುದು. ನಾನು ಕೇಳುತ್ತೇನೆ, ನಮ್ಮ ಒಪ್ಪಂದದ ಪ್ರಕಾರ ಆಂಧ್ರಪ್ರದೇಶದವರೇ ಇಲ್ಲಿ ಮುಳುಗಡೆಯಾಗುವಂತಹ ಪ್ರದೇಶಕ್ಕೆ ಪರಿಹಾರ ಕೊಡಬೇಕು ಎಂದು ಇದೆ. ಯಾವ ಪವಿತ್ರ ಕ್ಷೇತ್ರಗಳು ಮುಳುಗಡೆಯಾಗುತ್ತವೆ, ಅದು ಆಗದ ಹಾಗೆ ಅದಕ್ಕೆ ಬೇಕಾದಂತಹ ಪರಿಹಾರ ಹಣವನ್ನು ಕೊಡಬೇಕು ಎಂದು ನಿಶ್ಚಯ ಆಗಿತ್ತು. ಹತ್ತಾರು ವರ್ಷ ಕಳೆದರೂ ಸಹ ಅವರು ಪ್ರಾಜೆಕ್ಟ್‌ನ್ನು ಕಂಪ್ಲೀಟ್ ಮಾಡಿ ಆವತ್ತು ಅವರು ನೀರಾವರಿ ಯೋಜನೆಗೆ ನೀರನ್ನು ಕೊಡುವಂತಹ ಕಾರ್ಯಕ್ರಮ ಮುಗಿದಮೇಲೂ ಸಹ ಇದುವರೆಗೂ ಭೂಮಿಯನ್ನು ಕಳೆದುಕೊಂಡಂತಹ ರೈತರಿಗೆ ಪರಿಹಾರ ಕೊಡುವುದರ ಬಗ್ಗೆ ತಾವು ಗಮನ ಕೊಡಲಿಲ್ಲ, ನಮ್ಮ ಪವಿತ್ರ ತೀರ್ಥ ಕ್ಷೇತ್ರಗಳನ್ನು ಉಳಿಸಿಕೊಳ್ಳುವ ಪ್ರಯತ್ನವಾಗಲಿಲ್ಲ. ಹಾಗೂ ಅಲ್ಲಿರುವ ಹಳ್ಳಿಗಳ ಸಂಪರ್ಕಕ್ಕೆ ಬೇಕಾದಂತಹ ಸೇತುವೆಯನ್ನು ಕಟ್ಟುವುದಕ್ಕೆ ಸರ್ಕಾರ ಗಮನ ಕೊಡಲಿಲ್ಲ. ಈ ರೀತಿಯಾಗಿ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿ ಆ ಬೇಸಿನ್‌ನಲ್ಲಿ ಇರುವಂತಹ ರೈತರು ಬೀದಿ ಪಾಲಾಗುವಂತಹ ಒಂದು ವಿಶೇಷವಾದಂತಹ ಸಂದರ್ಭ ಬಂದಿದೆ. ಅದಕ್ಕಾಗಿ ನಾರದಗಡ್ಡೆ ಮತ್ತು ಭೂಮಗಡ್ಡೆ ಪವಿತ್ರ ಕ್ಷೇತ್ರಗಳ ರಕ್ಷಣೆಗೆ ಪೂರ್ಣವಾದಂತಹ ವೆಚ್ಚವನ್ನು ಆಂಧ್ರ ಸರ್ಕಾರ ಭರಿಸಬೇಕು ಎಂದು ಇತ್ತು. ಇದುವರೆಗೂ ಅವರು ಎಷ್ಟು ಕೊಟ್ಟಿದ್ದಾರೆ, ಎಷ್ಟು ಕೆಲಸ ಮಾಡಿದ್ದಾರೆ? ಅದನ್ನು ತಾವು ಪ್ರಗತಿಯತ್ತ ತೆಗೆದುಕೊಂಡು ಹೋಗುತ್ತೀರಾ ಎನ್ನುವುದನ್ನು ಸಹ ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನೀರನ್ನು ಸಂಪೂರ್ಣವಾಗಿ ಪಕ್ಕದವರು ಉಪಯೋಗ

ಮಾಡಿಕೊಳ್ಳುವುದರಿಂದ ನಮ್ಮ ಭಾಗದ ರೈತರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಲಿಫ್ಟ್ ಇರಿಗೇಷನ್ ಬಗ್ಗೆ ಈಗಾಗಲೇ ವಿನಂತಿ ಮಾಡಿದ್ದೀರೋ ಆ ರೀತಿಯ ಒತ್ತಾಯವನ್ನು ತಂದಿದ್ದೀರೋ ನಮ್ಮ ರೈತರು ಉಪಯೋಗ ಮಾಡಿಕೊಳ್ಳುವಂತಹ ಕೆಲಸವನ್ನು ಏನಾದರೂ ಮಾಡಿದ್ದೀರೋ ಮತ್ತು ನಾರಾಯಣಗುಡ್ಡದ ಬಳಿ ಒಂಭತ್ತು ಕಿಲೋಮೀಟರ್‌ವರೆಗೆ ಟೂ ಲೈನ್ ಸೇತುವೆ ಕಟ್ಟಬೇಕು ಎಂದು ಪ್ರಪೋಸಲ್ ಇತ್ತು. ಅದನ್ನು ಮಾಡುವುದಕ್ಕೆ ತಾವು ಯೋಜನೆ ಮಾಡಿದ್ದೀರಾ? ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಕೇಳುತ್ತಾ ಎಲ್ಲೋ ಒಂದು ಕಡೆ ಮಾತನಾಡುವಂತಹ ಸಂದರ್ಭದಲ್ಲಿ ಆಂಧ್ರಪ್ರದೇಶ ಸರ್ಕಾರ 1.47 ಕೋಟಿ ರೂಪಾಯಿಗಳನ್ನು ಪರಿಹಾರ ನೀಡುವುದಕ್ಕೆ ನಮ್ಮ ಸರ್ಕಾರದಲ್ಲಿ ಡಿಪಾಸಿಟ್ ಇಟ್ಟಿದೆ. ಈಗಾಗಲೇ ಹಣವನ್ನೂ ಕೊಟ್ಟಿದ್ದಾರೆ ಎಂದು ಹೇಳಿದರು. ಆದರೆ ಇವತ್ತು ನನ್ನ ಅಂದಾಜಿನ ಪ್ರಕಾರ ಆ ಕೆಲಸವನ್ನು ಪೂರ್ಣ ಮಾಡುವುದಕ್ಕೆ ರೈತರಿಗೆ ಪರಿಹಾರ ಕೊಡುವುದಕ್ಕೆ ಮತ್ತು ತೀರ್ಥ ಕ್ಷೇತ್ರ ಉಳಿಸಿಕೊಳ್ಳುವುದಕ್ಕೆ ಅಲ್ಲಿ ಬ್ರಿಡ್ಜ್ ಕಟ್ಟುವುದಕ್ಕೆ 15ರಿಂದ 20 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಅಂದಾಜು ಇದೆ. ಅದರ ಬಗ್ಗೆ ಸರ್ಕಾರ ಏನಾದರೂ ಪ್ರಪೋಸಲ್ ಕಳುಹಿಸಿದೆಯಾ? ಆಂಧ್ರ ಸರ್ಕಾರಕ್ಕೆ ಈ ದಿಕ್ಕಿನಲ್ಲಿ ಏನಾದರೂ ಒತ್ತಾಯವನ್ನು ಮಾಡಿದ್ದೀರೋ? ಈ ಮುಳುಗಡೆಯಾಗುವಂತಹ ಕುರುವ ಕುರ್ದ ಅಗ್ರಹಾರ, ಪೂರ್ವಕಾಲ, ಮಂಗೀಗುಡ್ಡ ಗ್ರಾಮಗಳನ್ನು ಸ್ಥಳಾಂತರ ಮಾಡುವಂಥಾದ್ದು ಕೂಡ ಹಿಂದೆ ಪ್ರಸ್ತಾಪಿಸಲಾಗಿತ್ತು. ಆ ರೀತಿ ಗ್ರಾಮಗಳೇನಾದರೂ ಮುಳುಗಡೆಯಾಗುತ್ತವೆಯೇ? ಆ ಗ್ರಾಮಗಳನ್ನು ಸ್ಥಳಾಂತರ ಮಾಡುವುದಕ್ಕೆ ಏನಾದರೂ ವಿಶೇಷವಾದಂತಹ ಕಾರ್ಯಕ್ರಮವನ್ನು ಯೋಜಿಸಿದ್ದೀರಾ ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ದಿನಾಂಕ 17.3.95ರಲ್ಲಿ ಉಭಯ ರಾಜ್ಯಗಳ ಅಧಿಕಾರಿಗಳ ಮಟ್ಟದ ಒಂದು ಸಭೆ ನಡೆದಿದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು, ಆ ರೀತಿ ಎರಡು ರಾಜ್ಯಗಳ ಅಧಿಕಾರಿಗಳ ಸಭೆ ನಡೆದಿದ್ದರೆ ಆ ಸಭೆಯಲ್ಲಿ ಏನು ತೀರ್ಮಾನವನ್ನು ತಾವು ತೆಗೆದುಕೊಂಡಿದ್ದೀರಿ? ಹಾಗೂ ಈ ಯೋಜನೆಯಿಂದ ಉತ್ಪಾದಿಸುವಂತಹ ವಿದ್ಯುತ್ ಎಷ್ಟು? ಇದರಲ್ಲಿ ಕರ್ನಾಟಕದ ಪಾಲು ಎಷ್ಟು? ಆಂಧ್ರದ ಪಾಲು ಎಷ್ಟು ಎನ್ನುವುದನ್ನು ಸ್ಪಷ್ಟಪಡಿಸಬೇಕು. 1978ರ ಆಗಸ್ಟ್ ನಾಲ್ಕರಲ್ಲಿ ಎರಡು ರಾಜ್ಯಗಳ ಒಂದು ಒಪ್ಪಂದ ಏನಾಗಿತ್ತು ಆ ಒಪ್ಪಂದಕ್ಕೆ ಅಡ್ಡಿ ಆಗದ ರೀತಿಯಲ್ಲಿ ತಾವು ಒಂದು ಸೇತುವೆಯ ಕಾಮಗಾರಿಯನ್ನು ಎತ್ತರ ಆಗದಂತೆ ವಿಶೇಷವಾದ ಗಮನವನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ರಾಯಚೂರಿಗೆ ಹೋದಂತಹ ಸಂದರ್ಭದಲ್ಲಿ ಆ ತಾಲ್ಲೂಕಿನ ರೈತರು ಯಾರು ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ ಅವರಿಗೆ ಪರಿಹಾರವಾಗಿ ಕೊಡುವುದಕ್ಕೆ 15 ಕೋಟಿ ರೂಪಾಯಿ ಬೇಕಾಗುತ್ತದೆಂದು ಅಲ್ಲಿನ ಜಿಲ್ಲಾಧಿಕಾರಿಗಳು ಇದರ ವಿಚಾರವಾಗಿ ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆ. ಆಂಧ್ರಪ್ರದೇಶಕ್ಕೆ ಆವತ್ತು ನಾವು ಹೋದಂತಹ ಸಂದರ್ಭದಲ್ಲಿ ಕೇವಲ 38 ಲಕ್ಷ 75 ಸಾವಿರ ರೂಪಾಯಿಗಳು ಮಾತ್ರ

ಬಂದಿತ್ತು ಎನ್ನುವುದನ್ನು ಆವತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹೇಳಿದ್ದರು. ಈ ಯೋಜನೆ ಅಲ್ಲಿ ಪ್ರಾರಂಭವಾಗಿ ಆ ಒಂದು ಜುರಾಲ ಅಣೆಕಟ್ಟನ್ನು ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾಗಿ ಆ ರಾಜ್ಯದ ರೈತರಿಗೆ ನೀರನ್ನು ಕೊಡುವಂತಹ ಕೆಲಸ ಪ್ರಾರಂಭವಾದರೂ ಸಹ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಳ್ಳಿಗಳನ್ನು ಹಾಗೂ ಪವಿತ್ರವಾದಂತಹ ತೀರ್ಥಕ್ಷೇತ್ರಗಳನ್ನು ಉಳಿಸಿಕೊಳ್ಳುವ ಬಗ್ಗೆ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಮಾಡದೇ ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ಮಾಡಿದೆ. ಈಗಲಾದರೂ ಖರ್ಚಿಯ ಉಳಿವಿಗಾಗಿ ಈ ರಾಜ್ಯದ ಜನರಿಗೆ ಅನ್ಯಾಯ ಮಾಡುವಂತಹ ಕೆಲಸ ಆಗದ ರೀತಿಯಲ್ಲಿ ಸರ್ಕಾರ ಗಮನವನ್ನು ಹರಿಸಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತಾ ಬಹುಶಃ ಬಹಳಷ್ಟು ಸಮಯವನ್ನು ನಾನು ತೆಗೆದುಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ. ತಾವು ಉತ್ತರವನ್ನು ಕೊಟ್ಟನಂತರ ಕೆಲವು ಸ್ಪಷ್ಟೀಕರಣ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಧನ್ಯವಾದಗಳು.

1.40 ಪಿ.ಎಂ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್):- ಸನ್ಮಾನ್ಯ ಉಪಾಧ್ಯಕ್ಷರೆ, ಜುರಾಲ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ ಆದರೆ ಈ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಎಂದು ತಾವು ಅಪ್ಪಣೆಯನ್ನು ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸುತ್ತೇನೆ. ಸ್ವಲ್ಪ ಕಾಲಾವಕಾಶ ಹೆಚ್ಚಾಗುತ್ತದೆ ಏಕೆಂದರೆ ಇಬ್ಬರು ಮೂವರು ಸದಸ್ಯರುಕೂಡ ಮಾತನಾಡುವವರಿದ್ದಾರೆ. ಈಗ ಕೆಲವು ವಿವರಗಳನ್ನು ವಿರೋಧಪಕ್ಷದ ನಾಯಕರು ಕೊಟ್ಟಿದ್ದಾರೆ. ನಾನೂ ಕೂಡ ಖುದ್ದಾಗಿ ಹೋದವರ್ಷ ಈ ಜುರಾಲ ಪ್ರಾಜೆಕ್ಟ್‌ಗೆ ಭೇಟಿ ಕೊಟ್ಟಿದ್ದೆ. ಆಗ ಶ್ರೀಮಾನ್ ದೇವೇಗೌಡರು ಈ ಇಲಾಖೆಯನ್ನು ಸ್ವತಃ ವಹಿಸಿಕೊಂಡಿದ್ದರು ಮತ್ತು ಜನತಾ ದರ್ಶ ಕಾರ್ಯಕ್ರಮದಡಿ 1995ರಲ್ಲಿ ರಾಯಚೂರಿಗೆ ಭೇಟಿ ನೀಡಿದಾಗ ಅವರು ಸ್ಪಷ್ಟವಾಗಿ ಹೇಳಿದ್ದರು. ಏನೆಂದರೆ ಜುರಾಲ ಪ್ರಾಜೆಕ್ಟ್ ಏನು ಇವೊತ್ತು 314 ಮೀಟರ್‌ನಿಂದ 318 ಮೀಟರ್‌ಗೆ ಏನು ಮಾಡುತ್ತಿದ್ದಾರೆ ಇದಕ್ಕೆ ನಾನು ಅವಕಾಶವನ್ನು ಮಾಡಿಕೊಡುವುದಿಲ್ಲ, ಒಂದು ಇಂಚೂ ಕೂಡ ಎತ್ತರ ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ ಎನ್ನುವ ಮಾತನ್ನು ಅವರು ಹೇಳಿದ್ದರು. ಆದರೆ ಇವೊತ್ತು ಎಲ್ಲಿದ್ದೇವೆ ಅಂದರೆ 318 ಹೋಗಿ ಪುನಃ ಅದರ ಮೇಲೆ ಮೂರು ಅಡಿ ಅಂದರೆ ಒಂದು ಮೀಟರ ಹೆಚ್ಚಿಗೆ ಮಾಡಿದ್ದಾರೆ. 318 full Reservoir over capacity ಅವರ ಕೆಪಾಸಿಟಿ ಮತ್ತು ಅಲ್ಲಿಗೆ ಅಪ್ರೂವಲ್ ಆದಂತದ್ದು ಏನು ಹಿಂದೆ ಇತ್ತು ಅದರ ಮೇಲೆ ಪುನಃ ಇವೊತ್ತು ಒಂದು ಮೀಟರ್ ಅಂದರೆ ಮೂರು ಅಡಿ ಹೆಚ್ಚಿಗೆ ಮಾಡಿದ್ದಾರೆ. ಹೀಗೆ ಹೆಚ್ಚಿಗೆ ಮಾಡಿದ್ದುದು ನಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲ. ಒಂದು ಸಾರಿ ಶ್ರೀಮಾನ್ ಯಡಿಯೂರಪ್ಪನವರು ಹೋದರು, ಅದು ಆದಮೇಲೆ ನಾನೂ ಕೂಡ ತಕ್ಷಣವೇ ಒಂದೆರಡು ದಿವಸದಲ್ಲಿ ಅಲ್ಲಿಗೆ ಭೇಟಿ ಕೊಟ್ಟೆ. ನಾನು ರಾಯಚೂರಿನಲ್ಲೆ ಹೇಳಿದ್ದೆ ಇದು ಜಾಯಿಂಟ್ ಸರ್ವೆ ನೀವು

ಆರ್ಡರ್ ಮಾಡಬೇಕು, ಆಂಧ್ರಪ್ರದೇಶದ ಅಧಿಕಾರಿಗಳು ಮತ್ತು ಕರ್ನಾಟಕದ ರಾಜ್ಯದ ಅಧಿಕಾರಿಗಳು ಇವರಿಬ್ಬರೂ ಸೇರಿ, ಅಲ್ಲಿನ ಎಕ್ಸ್‌ಪರ್ಟ್ಸ್ ಸೇರಿ ಇದನ್ನು ಸರ್ವೆ ಮಾಡಿ ಎಂದು ಹೇಳಿ ನಮ್ಮ ಡಿಮ್ಯಾಂಡ್ ಇತ್ತು. ಈ ಸದನದಲ್ಲಿ ಅದನ್ನು ಪ್ರಸ್ತಾಪ ಮಾಡಿದ್ದೇನೆ. ಪ್ರಸ್ತಾಪ ಮಾಡಿದಾಗ ಜಾಯಿಂಟ್ ಸರ್ವೆಗೆ ನಾವು ಒಪ್ಪಿಕೊಂಡಿದ್ದೇವೆ, ಕಳುಹಿಸಿದ್ದೇವೆ ಆದರೆ ಅಂತಹ ಏನು ವ್ಯತ್ಯಾಸ ಆಗಿಲ್ಲ ಎಂದು ಹೇಳಿದ್ದಾರೆ. ಕೇವಲ ಒಂದು ಅಡಿಯೋ ಅಥವಾ ಒಂದುವರೆ ಅಡಿಯೋ ಮಾತ್ರ ಹೆಚ್ಚಿಗೆ ಆಗಿದೆ. ಏನು ಜಾಸ್ತಿ ಆಗಿಲ್ಲ ಎಂದು ಹೇಳಿದರು. ಆದರೆ ನಮಗೆ ಬಂದಿರತಕ್ಕಂಥ ವರದಿ ಪ್ರಕಾರ ಮತ್ತು ಖಚಿತವಾದಂಥ ಮಾಹಿತಿಯ ಪ್ರಕಾರ ಏಕೆಂದರೆ ಇದು ರಾಯಚೂರಿನಿಂದ ಕೇವಲ 68 ಕಿಲೋಮೀಟರ್‌ನಲ್ಲಿ ಇರತಕ್ಕಂಥ ಪ್ರಾಜೆಕ್ಟ್. ಪ್ರಿಯದರ್ಶಿನಿ ರೇವನ್‌ಪಲ್ಲಿ ಆಂಧ್ರದಲ್ಲಿರತಕ್ಕಂಥ ಒಂದು ಪ್ರಾಜೆಕ್ಟ್. ಅದಕ್ಕೆ ಈ ಒಂದು ರೇವನ್‌ಪಲ್ಲಿಯಲ್ಲಿರತಕ್ಕ ಪ್ರಿಯದರ್ಶಿನಿ ಜುರಾಲ ಪ್ರಾಜೆಕ್ಟ್ ಏನು ಇದೆ ಇದು ಮೂರು ಅಡಿಗಳವರೆಗೆ ಅವರು ಈಗಾಗಲೇ ಎತ್ತರಿಸಿದ್ದಾರೆ, ಮತ್ತು ಅವರು ತಮ್ಮ ಕೆಲಸ ಮುಗಿಸಿಯೂ ಬಿಟ್ಟಿದ್ದಾರೆ. ಈ 25ನೇ ಜುಲೈ 96ರಂದು ಅದರ ಲೆಫ್ಟ್ ಬ್ಯಾಂಕ್ ಕೆನಾಲ್, ರೈಟ ಬ್ಯಾಂಕ್ ಕೆನಾಲ್‌ದು ಉದ್ಘಾಟನೆಯೂ ಕೂಡ ಅವರು ಮ್ಹಾಡುವವರಿದ್ದಾರೆ. ಆದರೆ ಇಲ್ಲಿಯವರೆಗೆ ನಮ್ಮ ಸರ್ಕಾರ ಮುಳುಗಡೆಯಾಗಿರತಕ್ಕಂಥ ಪ್ರದೇಶದಲ್ಲಿರತಕ್ಕಂಥ ಜನರ ಬಗ್ಗೆಯೂ ಆಸಕ್ತಿಯನ್ನು ವಹಿಸಿ ಪುನರ್‌ವಸತಿ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಒಂದು ಕೋಟಿ 45 ಲಕ್ಷ ಅಥವಾ 47 ಲಕ್ಷ ಅವರು ಡಿಪಾಜಿಟ್ ಮಾಡಿದ್ದಾರೆ ಏಕೆಂದರೆ ರೋಡ್ಸ್ ಅಂಡ್ ಬ್ರಿಡ್ಜಸ್‌ಗೋಸ್ಕರ. ಆಮೇಲೆ 24 ಲಕ್ಷ ರೂಪಾಯಿಗಳನ್ನು ಈ ದೇವಸ್ಥಾನದ ಸುತ್ತ ಕಟ್ಟುವ ಗೋಡೆಯ ಕಟ್ಟಡಕ್ಕಾಗಿ ಡಿಪಾಜಿಟ್ ಮಾಡಿದ್ದಾರೆ. ಅದಕ್ಕೆ ವರದಿಗಳು ಬಂದಿವೆ. ಆದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಅಲ್ಲಿ ಸುಮಾರು 576 ಎಕರೆ ಮುಳುಗಡೆಯಾಗುತ್ತದೆ ಎಂದು ಹೇಳಿ ಹಿಂದೆ ಸರ್ವೆ ಮಾಡಿದ್ದರು, ಆದರೆ ಅಧ್ಯಕ್ಷರೆ ಅದು ಸತ್ಯಕ್ಕೆ ದೂರವಾದಂಥದ್ದು. ಇವೊತ್ತು ಮೂರು ಅಡಿ ಹೆಚ್ಚು ಮಾಡುವುದರಿಂದ ಮುಳಗಡೆಯಾಗುವ ಪ್ರದೇಶ ಕನಿಷ್ಟ ಪಕ್ಷ 2572 ಎಕರೆ ಆಗುತ್ತದೆ ಎಂಬತಕ್ಕಂಥ ಮಾತನ್ನು ನಾರದಗುಡ್ಡದ ದೇವಸ್ಥಾನದ ಹತ್ತಿರ ಇರತಕ್ಕಂಥ ಪಂಚಾಯಿತಿ ಸದಸ್ಯರು, ದಳಪತಿಯವರು ಅನೇಕ ಜನ ಇವೊತ್ತು ದೂರನ್ನು ಸಲ್ಲಿಸಿದ್ದಾರೆ. ಮತ್ತು ನಾವು ರಾಯಚೂರಿಗೆ ಹೋದಾಗ ನಮ್ಮನ್ನು ಭೇಟಿಯಾಗಿ ಹೇಳಿದ್ದಾರೆ. ಸುಮಾರು 2560 ಎಕರೆಗಿಂತಲೂ ಮೇಲ್ಪಟ್ಟು ಮುಳುಗಡೆಯಾಗುತ್ತದೆ. ಈಗೇನು ಹಿಂದೆ 576 ಎಕರೆ ಮುಳುಗಡೆಯಾಗುತ್ತದೆ ಎಂದು ಹೇಳಿದ್ದಾರೆ ಅದು ಸರಿಯಲ್ಲ ಎಂಬತಕ್ಕಂಥ ಮಾತು ಇವೊತ್ತು ಎಲ್ಲರೂ ಹೇಳುತ್ತಿದ್ದಾರೆ. ಈಗ ನೀರು ನಿಂತಿಲ್ಲ ಈ ಸೀಸನ್‌ನಲ್ಲಿ ಅವರು ನೀರನ್ನು ಜಲಾಶಯದ ತುಂಬಾ ನಿಲ್ಲಿಸಿದರೆ ಸಂಪೂರ್ಣವಾಗಿ ಈ ಸುಮಾರು 5-6 ಹಳ್ಳಿಗಳು ಏನಿದೆ ಈ ಹಳ್ಳಿಗಳಿಗೂ ಕೂಡ ಇದರಲ್ಲಿ ಮುಳುಗಡೆಯಾಗಿ, ಅವರಿಗೆ ಯಾವ ದಿಕ್ಕೂ ಇಲ್ಲ, ಕೇಳತಕ್ಕಂತಹವರು ಇಲ್ಲ, ಮತ್ತು ಅದರ ಬಗ್ಗೆ ಸರ್ಕಾರಕ್ಕೆ ಚಿಂತನೆ ಇಲ್ಲ. ಈಗ ನಾನು ಉದಾಹರಣೆಗೆ ಹೇಳುವುದಾದರೆ, ಮರಗಿಗಡ್ಡ 225 ಎಕರೆ ಅಲ್ಲಿ ಯಾವ

ಕಾರ್ಯಕ್ರಮವನ್ನೂ ನೋಡಲಿಲ್ಲ. ತಾವು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಹೇಳಬೇಕಾಗುತ್ತದೆ. ಆಮೇಲೆ ಕುರುವದುರ್ಗ 1147 ಎಕರೆ, ಆಮೇಲೆ ಅಗ್ರಹಾರ ಕುರುವವಾಲಕಲ್ ಇಲ್ಲಿ 985 ಮತ್ತು ನಾರದಗುಡ್ಡ 120 ಇಷ್ಟು ಹಳ್ಳಿಗಳಲ್ಲಿ ಇವೊತ್ತು ಜಮೀನುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಆದರೆ ನಿಮ್ಮ ಮಾಹಿತಿ ಪ್ರಕಾರ ಎಷ್ಟು 559, ಆಗಲೇ ನಾನು 576 ಎಂದು ಹೇಳಿದೆ ಅದನ್ನು ಕರೆಕ್ಟ್ ಮಾಡಿಕೊಳ್ಳಿ ನಿಮ್ಮ ರೆಕಾರ್ಡ್‌ನ ಪ್ರಕಾರ 559 ಎಕರೆ. ಅಂದರೆ ನೀವು ಇದನ್ನು ರೀಸರ್ವೆ ಮಾಡಿಸುವುದಕ್ಕೂ ತಯಾರಿಲ್ಲ, ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಯಾವ ಕೆಲಸಕ್ಕಾಗಿ ನೀವು ಅವರನ್ನು ಇಟ್ಟಿದ್ದೀರಿ? ಇವೊತ್ತು ರೀಸರ್ವೆ ಮಾಡಿದರೆ ಅಲ್ಲಿ ಹಳ್ಳಿ ಜನ ಹೇಳುತ್ತಾರೆ, ಇಷ್ಟೊಂದು ಹಳ್ಳಿಗಳು ಮುಳುಗಡೆಯಾಗುತ್ತವೆ, ಸುಮಾರು ಸಾವಿರಾರು ಎಕರೆ ಜಮೀನು ಹೋಗುತ್ತದೆ ಅದು ಫರ್ಟೈಲ್ ಲ್ಯಾಂಡ್. ತಮಗೆ ಗೊತ್ತಿದೆ ಅಧ್ಯಕ್ಷರೆ, ನದಿ ಪಕ್ಕದಲ್ಲಿರತಕ್ಕ ಜಮೀನು ಬಹಳ ಫಲವತ್ತಾಗಿರುತ್ತದೆ. ಆ ನದಿಯ ಪಕ್ಕದಲ್ಲಿರತಕ್ಕ ಜಮೀನು ಮುಳುಗಡೆಯಾಗುತ್ತವೆ, ಜೊತೆಯಲ್ಲಿ ಊರುಗಳು ಮುಳುಗುತ್ತವೆ ಅದಲ್ಲದೆ ಅಲ್ಲಿರತಕ್ಕಂಥ ಕೆಲವು ಪವಿತ್ರ ಸ್ಥಳಗಳಾದಂಥ ದತ್ತಾತ್ರೇಯ ದೇವಸ್ಥಾನ ಆಗಲಿ, ಅಥವಾ ನಾರದಮುನಿ ದೇವಸ್ಥಾನ ಆಗಲೀ ಅದು ಕೂಡ ಮುಳುಗಡೆಯಾಗುತ್ತದೆ. ಅದಕ್ಕೆ ಪ್ರೊಟೆಕ್ಷನ್ ಮಾಡುವುದಕ್ಕೋಸ್ಕರ ಅಂದಿನ ಕಾಲದಲ್ಲಿ ಸುಮಾರು 24 ಲಕ್ಷ ರೂಪಾಯಿ ಇದ್ದರೆ, ಇವೊತ್ತಿನ ಕಾಲದಲ್ಲಿ ಒಂದುವರೆ ಕೋಟಿ ರೂಪಾಯಿ ಆಗುತ್ತದೆ ಎನ್ನತಕ್ಕಂಥದ್ದನ್ನು ಅಂದಾಜು ಮಾಡಿದ್ದಾರೆ. ಅದಕ್ಕೆ ಮತ್ತೆ ತಲುಪಬೇಕಾದರೆ ಬ್ರಿಡ್‌ಜಸ್ ಬೇಕು, ಆ ಬ್ರಿಡ್ಜಸ್ ಕಟ್ಟಬೇಕಾದರು ಕೂಡ ಹಣ ಬೇಕು. ಹೀಗೆ ಇವೊತ್ತು ಯಾವ ಚಿಂತನೆಯನ್ನು ಮಾಡದೆ ನಾವು ನಿದ್ದೆಯಲ್ಲಿದ್ದರೆ ಅವರು ಇದೇ ರೀತಿಯಾಗಿ ಉಪಯೋಗ ಮಾಡಿಕೊಳ್ಳುತ್ತಾರೆ. ಮೊನ್ನೆ ನಮ್ಮ ನಂಜೇಗೌಡರು ಹೇಳಿದ ಹಾಗೆ, ಅವರಿಗೆ ನಮ್ಮ ಕೃಷ್ಣಾ ಬೇಸಿನ್‌ನಲ್ಲಿ ಅಲಾಟ್ ಆದಂಥ 800 ಟಿ.ಎಂ.ಸಿ. ನೀರಿನಲ್ಲಿ ಈಗಾಗಲೇ ಅವರು 789 ಟಿ.ಎಂ.ಸಿ ನೀರನ್ನು ಉಪಯೋಗ ಮಾಡಿಕೊಂಡಿದ್ದಾರೆ. ಕೇವಲ 11 ಟಿ.ಎಂ.ಸಿ. ನೀರನ್ನು ಮಾತ್ರ ಉಪಯೋಗ ಮಾಡಿಕೊಳ್ಳತಕ್ಕಂಥದ್ದು ಉಳಿದಿದೆ ಎನ್ನತಕ್ಕಂಥದ್ದು ಅವರು ಹೇಳಿದರು. ಅದರ ಪ್ರಕಾರ ನೋಡಿದರೆ ಇವೊತ್ತು ಈ 318 ಮೀಟರ್ ಮತ್ತು ಅದರ ಮೇಲೆ 1 ಮೀಟರ್ ಅಂದರೆ 319 ಮೀಟರ್ ಇವೊತ್ತು ಎತ್ತರ ಮಾಡಿ ಜುರಾಲ ಪ್ರಾಜೆಕ್ಟ್ ಏನು ಕಟ್ಟಿಸಿದ್ದಾರೆ ಅಲ್ಲಿ ಸರ್ವೇಸಾಧಾರಣವಾಗಿ ಇವೊತ್ತು 18 ಟಿ.ಎಂ.ಸಿ. ನೀರು ನಿಲ್ಲುವಷ್ಟು ಅವಕಾಶ ಮಾಡಿಕೊಂಡಿದ್ದಾರೆ. ಎಲ್ಲಿ ಅವರಿಗೆ 11, 12 ಟಿ.ಎಂ.ಸಿ.ಯಷ್ಟು ಅವಕಾಶ ಇತ್ತು, ನಾವು ಮೇಲುಗಡೆ ಇನ್ನೂ ಕಟ್ಟಿಕೊಂಡಿಲ್ಲ ಎಂದು ತಿಳಿದುಕೊಂಡು ಅದು ಆಲಮಟ್ಟಿಯೇ ಇರಬಹುದು, ನಮ್ಮ ಪ್ರಾಜೆಕ್ಟ್‌ಗಳು ಇನ್ನೂ ಪೂರ್ಣಗೊಳ್ಳದೆ, ನಾವು ಇನ್ನೂ ಆಲಮಟ್ಟಿ ಅಣೆಕಟ್ಟನ್ನು ಸಂಪೂರ್ಣವಾಗಿ ಕಟ್ಟಿಲ್ಲ ಅದಕ್ಕೆ ಅವರಿಗೆ ನೀರು ಹೋಗಿಯೇ ಹೋಗುತ್ತದೆ. ಅದಕ್ಕೆ ಅವರು ಅದನ್ನು ತಿಳಿದುಕೊಂಡು ಏನು ಮಾಡಿದ್ದಾರೆ ತಮ್ಮ ಡ್ಯಾಂನ ಎತ್ತರವನ್ನು ಈಗಾಗಲೇ ಒಂದು ಇಂಚು ಎತ್ತರಿಸಿಕೊಂಡಿದ್ದಾರೆ. ಅದರಿಂದ

ಏನಾಗಿದೆ ಎಲ್ಲಿ ಅವರಿಗೆ ಬಹಳ ಪ್ರಯತ್ನ ಮಾಡಿದರೂ ಕೂಡ ಅಥವಾ ನಮ್ಮ ನೀರು ಅವರಿಗೆ ಎಷ್ಟೇ ಬಿಟ್ಟರೂ ಕೂಡ ಅವರು ಸಂಗ್ರಹಣೆ ಮಾಡತಕ್ಕಂಥದ್ದು ಆರರಲ್ಲಿ 13, 14 ಟಿ.ಎಂ.ಸಿ.ಯಾದರೂ ಜಾಸ್ತಿಯಾಗಿದೆ. ಆದರೆ ಇವೊತ್ತು 18 ಟಿ.ಎಂ.ಸಿ. ನೀರನ್ನು ಉಳಿಸಿಕೊಳ್ಳುವಷ್ಟು ಕೆಪಾಸಿಟಿಯ ರಿಜರ್ವಾಯರ್ ಮಾಡಿಕೊಂಡು ಇವೊತ್ತು ಅವರು ಕುಳಿತಿದ್ದಾರೆ. ಇದಕ್ಕೂ ನಿಮ್ಮ ಗಮನ ಇಲ್ಲ. ಎರಡನೆಯದು ಎಂದು ಹೇಳಿದರೆ, ವಿಚಿತ್ರ. 220 ಮೆಗಾವಾಟ್ ಜನರೇಟ್ ಮಾಡತಕ್ಕಂಥ ಒಂದು ಪ್ರಾಜೆಕ್ಟ್ ನಮ್ಮ ಪವರ್ ಪ್ರಾಜೆಕ್ಟ್ ಇದೆ. ಅದಕ್ಕೆ ಸುಮಾರು ಈಗಿನ ಅಂದಾಜಿನ ಪ್ರಕಾರ ಒಂದು ಮೆಗಾವ್ಯಾಟಿಗೆ ಮೂರು ಕೋಟಿ ರೂಪಾಯಿಗಳನ್ನು ನಾನು ಇವೊತ್ತಿನ ಲೆಕ್ಕದಲ್ಲಿ ಹಿಡಿದರೂ ಕೂಡ ಇವೊತ್ತು ಅದಕ್ಕೆ 740-50 ಕೋಟಿ ರೂಪಾಯಿಗಳ ಮೇಲೆ ಬೇಕು.

ಆದರೆ ಹೈಡಲ್ ಪ್ರಾಜೆಕ್ಟ್ ಚೀಪ್ ಆಗಿ ಆಗುತ್ತದೆನ್ನುವ ವಾದವಿದ್ದ ಕಾರಣ ಇವತ್ತು ಎರಡು ಕೋಟಿ ರೂಪಾಯಿಗಳನ್ನು ಇಟ್ಟರು. ಸರ್ವೆಸಾಧಾರಣವಾಗಿ ಅದಕ್ಕೆ 5 ಕೋಟಿ ರೂಪಾಯಿಗಳು ಬೇಕು. ಆ 5 ಕೋಟಿ ರೂಪಾಯಿಗಳನ್ನು ಖರ್ಚು ಮಾ` ಕರ್ನಾಟಕ ಮತ್ತು ಆಂಧ್ರಪ್ರದೇಶ ಎರಡು ಸೇರಿ ಜಾಯಿಂಟ್ ಪ್ರಾಜೆಕ್ಟ್ ಮಾಡಬೇಕೆ ಎ 1978ರ ಅಗ್ರಿಮೆಂಟ್‌ನಲ್ಲಿದೆ. ನಾವು ಇದನ್ನು 1978ರಲ್ಲಿ ಒಪ್ಪಿದ್ದೇವೆಂದ ವೆ ಲೆ ಇದು ಜಾಯಿಂಟ್ ಪ್ರಾಜೆಕ್ಟ್ ಆಗಬೇಕು. ಪ್ರಾಜೆಕ್ಟ್‌ಗೆ ತಗಲುವಂತಹ ಖರ್ಚು ನಾವು ಅರ್ಧ ಅವರು ಅರ್ಧ ಖರ್ಚು ಹಾಕಬೇಕು, ಮತ್ತು ಉತ್ಪಾದಿಸಿದಂತಹ ವಿದ್ಯುಚ್ಛಕ್ತಿಯನ್ನು ಎರಡು ರಾಜ್ಯಗಳು ಹಂಚಿಕೊಳ್ಳಬೇಕು ಮತ್ತು ಮುಳುಗಡೆಯಾದಂತಹ ಪ್ರದೇಶಗಳಿಗೆ ಅವರು ಪರಿಹಾರವನ್ನು ಕೊಡಬೇಕೆಂದು ಅಗ್ರಿಮೆಂಟ್ ಮಾಡಿಕೊಂಡಿದ್ದು, ಅದರ ಎತ್ತರವನ್ನು ಸಹ 314 ಅಡಿಗೆ ಸೀಮಿತವಾಗಿರಬೇಕೆನ್ನುವಂಥಾದ್ದು ಕೂಡ ಅಗ್ರಿಮೆಂಟ್‌ನಲ್ಲಿ ಇದೆ. ಈ ಎಲ್ಲಾ ಕಂಡೀಷನ್ ಅಂದರೆ ದೇವಸ್ಥಾನಗಳು ಮುಳುಗಡೆಯಾಗಬಾರದು ಬ್ರಿಡ್ಜ್‌ಗಳನ್ನು ಕಟ್ಟಬೇಕು. ರಿಹ್ಯಾಬಿಲಿಟೇಷನ್ ಎಂದು ಹೇಳಿ 1978ರಲ್ಲಿ ಆಗಿನ ಕರ್ನಾಟಕದ ಮುಖ್ಯಮಂತ್ರಿಯವರಾಗಿದ್ದ ಶ್ರೀ ದೇವರಾಜ್ ಅರಸು ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಚೆನ್ನಾರೆಡ್ಡಿಯವರು ಮಾಡಿಕೊಂಡಿದ್ದಂತಹ ಅಗ್ರಿಮೆಂಟ್ ಆಗಿದೆ. ಆದರೆ ಇವತ್ತು ನೀವು ಪವರ್ ಪ್ರಾಜೆಕ್ಟ್‌ಗೆ ಒಂದು ಪೈಸೆಯು ಖರ್ಚು ಮಾಡುತ್ತಾ ಇಲ್ಲವೆಂದರೆ ಇದರಲ್ಲಿ ನಿಮಗೆ ಆಸಕ್ತಿ ಇಲ್ಲವೆಂದಾಗುತ್ತದೆ. ಈ ಪವರ್ ಪ್ರಾಜೆಕ್ಟ್‌ಗೆ ಬೇಕಾದಂತಹ ಹಣವನ್ನು ಅವರು ಖರ್ಚು ಮಾಡಿಕೊಂಡು ನಾಳೆ ನೀವು ಏನು ಕೇಳಿದರೂ ಕೊಡುವುದಿಲ್ಲ. ನೀವು ಏಕೆ ಎಂದು ಕೇಳಿದರೆ ನೀವು ಪಾರ್ಟಿಸಿಪೇಟ್ ಮಾಡಿಲ್ಲ ನಿಮಗೆ ಏಕೆ ಕೊಡಬೇಕೆಂದು ಕೇಳುತ್ತಾರೆ. ನೀವು ಅದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ನೀವು ಇದಕ್ಕೆ ಏನು ಖರ್ಚು ಮಾಡಿದ್ದೀರಿ, ನಿಮಗೆ ಇದರಲ್ಲಿ ಆಸಕ್ತಿ ಇಲ್ಲ. ಹೋದ ಸಾರಿ ಇದೇ ಸದನದಲ್ಲಿ ಹಿಂದಿನ ಮುಖ್ಯಮಂತ್ರಿಯವರು ಈ ಪ್ರಾಜೆಕ್ಟ್‌ಗೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದರು. ರಿಹ್ಯಾಬಿಲಿಟೇಶನ್‌ಗೆ 16 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದು, ಆ ಹಣವನ್ನು ಆಂಧ್ರಪ್ರದೇಶದವರು ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ

ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿ ಆಶ್ವಾಸನೆಯನ್ನು ಕೊಟ್ಟು ಇವತ್ತು ನೀವೇ ಹಿಂದೆ ಹೋಗುತ್ತಿದ್ದೀರಿ. ನಿಜಕ್ಕೂ ನಾವು ಪ್ರಿವಿಲೇಜನ್ನು ಮೂವ್ ಮಾಡಬೇಕಾಗಿತ್ತು. ಏಕೆಂದರೆ ಇದರಲ್ಲಿ ಮಾತನ್ನು ಕೊಟ್ಟು ರಿಹ್ಯಾಬಿಲಿಟೇಷನ ಪ್ರೋಗ್ರಾಂ ಒಂದು ವರ್ಷದಲ್ಲಿ ಕಂಪ್ಲೀಟ್ ಮಾಡುತ್ತೇವೆಂದು ಹೇಳಿ ಜೈಸೆ ಥೇ ವೈಸೆ, ಅಂದರೆ As it is, ಹೇಗೆ ಇತ್ತೋ ಹಾಗೆಯೇ ಇದೆ. ಅಂದರೆ ಸರ್ಕಾರ ಏನು ನಿದ್ದೆ ಮಾಡುತ್ತಿದೆಯೋ ಅಥವಾ ಕಾಳಜಿ ಇಲ್ಲವೋ? ಅಥವಾ ಆಂಧ್ರಪ್ರದೇಶ ಸರ್ಕಾರದೊಡನೆ ಪ್ರೀತಿ, ವಿಶ್ವಾಸ ಜಾಸ್ತಿ ಬೆಳೆಸಿಕೊಳ್ಳಬೇಕೆಂದು ಮಾಡಿದೆಯೋ ಎನ್ನುವಂಥದ್ದು ತಾವು ಸ್ಪಷ್ಟಪಡಿಸಬೇಕು. ಪದೇ ಪದೇ ನಾವು ಒಂದು ಹನಿ ನೀರು ಬಿಡುವುದಿಲ್ಲ, ನಮಗೆ ಅಲೋಕೇಟ್ ಆಗಿರುವಂತಹ 734 ಟಿ.ಎಂ.ಸಿ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುತ್ತೇವೆಂದು ಹೇಳಿ ಭಾಷಣವನ್ನು ಮಾಡುತ್ತಾರೆ. ಆದರೆ ಅದನ್ನು ಕೃತಿಯಲ್ಲಾಗಲೀ, ಕಾರ್ಯರೂಪದಲ್ಲಾಗಲಿ ನೀವು ಮಾಡುತ್ತಾ ಇಲ್ಲ. ಅದಕ್ಕಾಗಿ ನೀವು ಇದರ ಬಗ್ಗೆಯೂ ಸ್ಪಷ್ಟವಾಗಿ ಹೇಳಬೇಕು. ಎಷ್ಟು ಮುಳುಗಡೆಯಾದಂತಹ ಪ್ರದೇಶಗಳಿಗೆ ನೀವು ಖರ್ಚು ಮಾಡಿದ್ದೀರಿ? ಎಷ್ಟು ಕೆಲಸವನ್ನು ತೆಗೆದುಕೊಂಡಿದ್ದೀರಿ? ಮತ್ತು ಸುಮಾರು ಎರಡು ಸಾವಿರಕ್ಕೂ ಮೇಲ್ಪಟ್ಟು ಅಂದರೆ 2477 ಎಕರೆ ಜಮೀನು ಮುಳುಗಡೆಯಾಗಿದೆ. ನಿಮ್ಮ ಅಂದಾಜಿನ ಪ್ರಕಾರ 559 ಎಕರೆ ಎಂದು ಹೇಳುತ್ತೀರಿ, ಇದು ಸತ್ಯಕ್ಕೆ ದೂರವಾದದ್ದು. ಅದಕ್ಕೆ 2477 ಎಕರೆಗೆ ಹಣವನ್ನು ಕೊಡುವಂಥ ವಿಷಯವನ್ನು ಏನು ಮಾಡಿದ್ದೀರಿ, ಇವೆಲ್ಲವನ್ನು ಸ್ಪಷ್ಟಪಡಿಸಬೇಕು? ಪವರ್ ಜನರೇಷನ್‌ನಲ್ಲಿ ಎಷ್ಟು ಹಣವನ್ನು ತಾವು ಒದಗಿಸಿದ್ದೀರಿ? ಎಷ್ಟು ಹಣವನ್ನು ಈಗಾಗಲೇ ಕೊಟ್ಟಿದ್ದೀರಿ? ಎಷ್ಟರ ಮಟ್ಟಿಗೆ ನಿಮ್ಮ ಮತ್ತು ಆಂಧ್ರಪ್ರದೇಶದ ಮಾತುಕತೆಯಾಗಿದೆ? 220 ಮೆ.ವ್ಯಾ. ಪವರ್ ಜನರೇಷನ್ ಮಾಡುವುದಕ್ಕೆ ಸಹಾಯ ಮಾಡಿದ್ದೀರಿ ಎನ್ನುವುದನ್ನು ಸ್ಪಷ್ಟಪಡಿಸಬೇಕು.ಏಕೆಂದರೆ ದಿನ ದಿನಕ್ಕೂ ಸಮಸ್ಯೆ ಗಂಭೀರವಾಗುತ್ತಿದೆ. ಆಂಧ್ರಪ್ರದೇಶದವರ ಸಮಸ್ಯೆ ಬಗೆಹರಿದಿದೆ. ಅವರು ಬಜಾವತ್ ಅವಾರ್ಡ್ ಪ್ರಕಾರ ನೀರನ್ನು ಯೂಟಿಲೈಜ್ ಮಾಡುವಂತಹ ಜವಾಬ್ದಾರಿ ನಮ್ಮದೂ ಇದೆ. ಅವರಿಗೆ ಅಲೋಕೇಷನ್ ಆದಂತಹ ಅವರ ಪಾಲಿನ ನೀರನ್ನು ಉಪಯೋಗ ಮಾಡಿಕೊಂಡು, ಈಗ ಅವರು ಕಾಲು ಕೆರೆದುಕೊಂಡು ಜಗಳಕ್ಕೆ ಕಾಯುತ್ತಿದ್ದಾರೆ. ನೀವು ಮಾತ್ರ ಕಣ್ಣು ಮುಚ್ಚಿಕೊಂಡು ಕುಳಿತ್ತಿದ್ದೀರಿ. ನಾವು ಏನು ಮಾಡಿದರೂ ಸರಿ ದೆಹಲಿ ಕುರ್ಚಿ ಉಳಿದರೆ ಸಾಕು ಎಂದು ನೀವು ಅದಕ್ಕೆ ಏಕೆ ಗಂಟು ಬಿದ್ದಿದ್ದೀರಿ? ಅದನ್ನು ಉಳಿಸಿಕೊಳ್ಳುವವರು ಅಲ್ಲಿ ಉಳಿಸಿಕೊಳ್ಳುತ್ತಾರೆ. ನೀವು ಇದರ ಬಗ್ಗೆ ನಿಷ್ಠುರವಾಗಿ ಮಾತನಾಡಿ, ಇದರ ಬಗ್ಗೆ ಏನು ಮಾಡಿದ್ದೀರೆಂಬುದು ನೀವು ಹೊರಗಡೆ ಬಂದು ಅದಕ್ಕೆ ವ್ಯವಸ್ಥೆ ಮಾಡಿ. ಅವರು ನಿನ್ನೆ ಸದನದಲ್ಲಿ ಪಕ್ಷ ಭೇದವನ್ನು ಮರೆತು ಆಲಮಟ್ಟಿ ಡ್ಯಾಮ್‌ನ ಎತ್ತರ ಮಾಡಬಾರದೆಂದು ಎಲ್ಲಾ ಪಕ್ಷದವರು ಒಮ್ಮತದಿಂದ ರಿಸಲ್ಯೂಶನ್ ಪಾಸ್ ಮಾಡಿದ್ದಾರೆ. ನಾವು ಕೇಂದ್ರಸರ್ಕಾರಕ್ಕೆ ಒತ್ತಡವನ್ನು ತರುತ್ತೇವೆ. ಒಂದು ವೇಳೆ ಕೇಂದ್ರಸರ್ಕಾರ ಇದರ ಬಗ್ಗೆ ನಿರ್ಲಕ್ಷ್ಯ ಮಾಡಿದರೆ ನಾವು ಚಳುವಳಿಯನ್ನು

ಮಾಡುತ್ತೇವೆಂದು ಅವರು ಸದನದಲ್ಲಿ ಒಮ್ಮತದಿಂದ ರಿಸಲ್ಯೂಶನ್ ಅನ್ನು ಅಲ್ಲಿನ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡುರವರು ಮೂವ್ ಮಾಡಿದ್ದಾರೆ. ಎಲ್ಲಾ ಪಕ್ಷದ ಸದಸ್ಯರು ಅದನ್ನು ಒಪ್ಪಿಕೊಂಡು ಒಮ್ಮತದಿಂದ ಪಾಸ್ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಬಾಯಿ ಮುಚ್ಚಿಕೊಂಡು ಕುಳಿತರೆ ಖಂಡಿತವಾಗಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತದೆ. ಇದರ ಬಗ್ಗೆ ತಾವು ಏಕೆ ರಿಲೀಫ್ ಮಾಡುತ್ತಾ ಇಲ್ಲ? ತಾವು ಮಾತು ಕೊಟ್ಟು ಒಂದು ವರ್ಷವಾಯಿತು. ಇದೇ ಸದನದಲ್ಲಿ ಮಾತು ಕೊಟ್ಟಂತೆ ನೀವು ನಡೆದುಕೊಳ್ಳಲಿಲ್ಲವೆಂದರೆ ನಾವು ಏನು ಹೇಳಬೇಕು? ಒಬ್ಬರಿಗೊಬ್ಬರು ಕಚ್ಚಾಡುವುದಕ್ಕಾಗುತ್ತದೆಯೇ? ಇಲ್ಲ ಜಗಳವಾಡೋಣವೇ? ಏಕೆ ನಮ್ಮ ಮಾತು ಕೇಳಲಿಲ್ಲ. ಇಲ್ಲ ಜನರನ್ನು ನಿಮ್ಮ ಮೇಲೆ ಎತ್ತಿಗಟ್ಟಬೇಕೇ? ಅದನ್ನು ನೀವು ಒಪ್ಪುತ್ತೀರೋ? ಬಂದಂತಹ ಮಂತ್ರಿಗಳನ್ನು ಬರಗೊಡಬೇಡಿ, ಸರ್ಕಾರದವರನ್ನು ಬರಗೊಡಬೇಡಿ, ಅಧಿಕಾರಿಗಳನ್ನು ಬರಬೇಡಿ ಎಂದು ಹೇಳಿ ಚಳುವಳಿಯನ್ನು ಮಾಡಿಸಬೇಕೇ? ಅದರಿಂದಲೇ ಈ ಸಮಸ್ಯೆ ಪರಿಹಾರವಾಗುತ್ತದೆಂದರೆ ನಾವು ಜನರಿಗೆ ನೀವು ಬೀದಿಗೆ ಇಳಿಯಿರಿ ಆಗಲೇ ಈ ಸರ್ಕಾರ ಕಣ್ಣು ತೆಗೆಯುತ್ತದೆಂದು ಹೇಳಬಹುದು. ಈಗ ಜನರು ನೋಡುತ್ತಾರೆ, ಇವರು ಮೊದಲಿನಿಂದಲೂ ಹೇಳಿಕೊಂಡು ಬರುತ್ತಿದ್ದಾರೆ. ನಾವು ಮಣ್ಣಿನ ಮಕ್ಕಳು, ರೈತರ ಮಕ್ಕಳು ಎಂದು ಏನು ಬೇಕೋ ಆ ಪದಗಳನ್ನೆಲ್ಲಾ ಉಪಯೋಗ ಮಾಡಿದ್ದಾರೆ. ಅದಕ್ಕೆ ಜನರು ಕಾದು ನೋಡುತ್ತಿದ್ದಾರೆ. ಮಾನ್ಯ ನಾಗೇಗೌಡರು ನಾನು ಮೊನ್ನೆ ಬಂದಿದ್ದೇನೆ ಎಂದು ಹೇಳಬಹುದು. ಈಗ ಆ ಪ್ರಶ್ನೆ ಬರುವುದಿಲ್ಲ, ಇಲ್ಲಿ ಈ ಸದನದಲ್ಲಿ ಏನು ಉತ್ತರವನ್ನು ಕೊಡುತ್ತೀರಿ, ಹಿಂದೆ ಯಾರೇ ಮಂತ್ರಿಗಳು ಇರಬಹುದು ಅಥವಾ ಯಾರೇ ನಿಮ್ಮ ಪರವಾಗಿ ಮಾತನಾಡಿರಬಹುದು, ಆ ಕಡತವನ್ನು ನೋಡಿ ಅವರು ಕೊಟ್ಟಿರುವಂತಹ ಮಾತು ಭರವಸೆಗಳನ್ನು ಉಳಿಸಿಕೊಂಡು ಹೋಗುವಂಥದ್ದನ್ನು ಮಾಡಬೇಕು. ಈ ಸದನದಲ್ಲಿಏನು ಭರವಸೆಯನ್ನು ಕೊಡುತ್ತೀರಿ. ಆ ಭರವಸೆಗಳು ಇಂಪ್ಲಿಮೆಂಟ್ ಮಾಡುವುದಕ್ಕೆ ಪುನಃ ಫೈಲ್ ತರಿಸಿಕೊಂಡು ನೋಡುವುದಿಲ್ಲ. ನಾನು ಇಂತಹ ಭರವಸೆಯನ್ನು ಸದನದಲ್ಲಿ ಕೊಟ್ಟಿದ್ದೇನೆ. ನಾಳೆ ಈ ಪ್ರಶ್ನೆ ಸದನದಲ್ಲಿ ಪುನಃ ಬಂದು ಛೀಮಾರಿ ಹಾಕುತ್ತಾರೆನ್ನುವುದರ ಬಗ್ಗೆ ಸರ್ಕಾರಕ್ಕೆ ಗಮನವಿಲ್ಲ. ಆದುದರಿಂದ ಹಿಂದೆ ಏನು ಹೇಳುತ್ತಿದ್ದರೆಂದರೆ ಯಾವುದೇ ಮಾತು ಬಂದರೂ ಕೂಡ ನಾವು ಹೆಚ್ಚು ಕಡಿಮೆ ಪರಿಶೀಲಿಸುತ್ತೇವೆಂದು ಹೇಳುತ್ತಿದ್ದರೆ ಹೊರತು ನಾವು ಇಷ್ಟು ದಿವಸಗಳಲ್ಲಿ ಮಾಡುತ್ತೇವೆ ಮಾಡದೆ ಹೋದರೆ ನಾನು ಈ ಕುರ್ಚಿಯಲ್ಲಿ ಇರುವುದಿಲ್ಲ ಎಂದು ಹೇಳುತ್ತಿರಲಿಲ್ಲ. ಇಲ್ಲಿ ನಿನ್ನೆ ಒಬ್ಬ ಮಂತ್ರಿಯವರು ಹೇಳಿದರು. ನಾನು ಈ ಅರಣ್ಯ ಇಲಾಖೆಯನ್ನು ಸುಧಾರಣೆ ಮಾಡದೇ ಹೋದರೆ ಮಂತ್ರಿ ಪದವಿಯನ್ನೇ ಬಿಡುತ್ತೇನೆ ಎಂದರು. ಅವರ ಮಾತನ್ನು ಕೇಳಿಸಿಕೊಂಡು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಗಿಡಗಳನ್ನು ನೆಡುವ ಬಗ್ಗೆ ಮಾನ್ಯ ವಿಶ್ವೇಶ್ವರ ಹೆಗಡೆಯವರ ಪ್ರಶ್ನೆಗೆ ನಾನು ಸುಧಾರಣೆ ಮಾಡುತ್ತೇನೆ. ನಾನು ಮಂತ್ರಿಯಾಗಿ ಮೊನ್ನೆ ಬಂದಿದ್ದೇನೆ. ಒಂದು ವೇಳೆ ನಾನು ಮಾಡದೇ ಹೋದರೆ ಈ ಜಾಗಕ್ಕೆ ನಾನು ಇರುವುದಕ್ಕೆ

ತಯಾರಿಲ್ಲವೆಂದು ಹೇಳಿದರು. ಇಷ್ಟೊಂದು ಜೋರಾಗಿ ಹೆಮ್ಮೆಯಿಂದ ಹೇಳುವಂತಹ ಇವರು ಕೊಟ್ಟಿರುವಂತಹ ಆಶ್ವಾಸನೆಗಳನ್ನು ಇಂಪ್ಲಿಮೆಂಟ್ ಮಾಡಲಿಲ್ಲವೆಂದರೆ ನಿಮಗೆ ಶೋಭೆ ಕೊಡುತ್ತದೆಯೇ? ಅದಕ್ಕಾಗಿ ದಯಮಾಡಿ ಪವರ್ ಜನರೇಟ್ ಬಗ್ಗೆ ನಿಮ್ಮ ನಿಲುವಿನ ಬಗ್ಗೆ, ಇದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ? ನಿಮ್ಮ ಪಾಲು ಎಷ್ಟು ಇದೆಯೆಂದು ಹೇಳಬೇಕು. ಒಂದು ಮೀಟರ್ ಎತ್ತರ ಅವರು ಹೆಚ್ಚು ಮಾಡಿದ್ದಾರೆ. ಅದನ್ನು ಏಕೆ ಮಾಡಿದರು? ಇದಕ್ಕೆ ಯಾರು ಕಾರಣಕರ್ತರು ಎಂದು ತಾವು ಸ್ಪಷ್ಟಪಡಿಸಬೇಕು. ಜಾಯಿಂಟ್ ಸರ್ವೆಯಾದ ಮೇಲೆ ಯಾವ ಅಧಿಕಾರಿಗಳು ನಿಮ್ಮನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಅಲ್ಲಿ ಒಂದು ಇಂಚು ಇಲ್ಲವೆಂದು ಏನು ಹೇಳಿದ್ದಾರೆ, ಅವರಿಗೆ ಏನು ಶಿಕ್ಷೆಯನ್ನು ಕೊಡುತ್ತೀರಿ, ಎಂಬುದನ್ನು ನಮಗೆ ಸ್ಪಷ್ಟಪಡಿಸಬೇಕೆಂದು ಹೇಳಿ, ನಾನು ತಮ್ಮ ಮುಖಾಂತರ ಅವರನ್ನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷರೆ, ಜುರಾಲ ಅಣೆಕಟ್ಟಿನ ಬಗ್ಗೆ 25ನೇ ತಾರೀಖು ಅಲ್ಲಿನ ಮುಖ್ಯಮಂತ್ರಿಯವರು ಡ್ಯಾಮ್ ಅನ್ನು ಎತ್ತರ ಮಾಡಿ ನೀರನ್ನು ಶೇಖರಣೆ ಮಾಡಿರುವಂತಹ ಜಲಾಶಯವನು ಉದ್ಘಾಟನೆ ಮಾಡುವವರಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರದ ಪ್ರತಿಭಟನೆ ಏನು ಎಂಬುದು ನಮಗೆ ಸ್ಪಷ್ಟವಾಗಿಲ್ಲ. ಈ ಜುರಾಲ ಅಣೆಕಟ್ಟಿನಿಂದ ಕರ್ನಾಟಕ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಸರ್ಕಾರಕ್ಕಿಂತ ಮೊದಲು ರಾಯಚೂರಿನ ಪತ್ರಿಕಾ ವರದಿಗಾರರು ಪತ್ರಿಕೆಗಳ ಮೂಲಕ ಬೆಳಕು ಚೆಲ್ಲಿದರು. ಇದನ್ನು ಬಹಳ ದಿವಸಗಳ ಹಿಂದೆಯೇ ಮಾಡಿದರು. ಮೊನ್ನೆ ಕೂಡ ಒಂದು ಲೇಖನ ಇದರ ಬಗ್ಗೆ ಬಂದಿದೆ. ಈಗ ಆಂಧ್ರಪ್ರದೇಶದ ಶಾಸನಸಭೆಯಲ್ಲಿ ಪಕ್ಷಭೇದವನ್ನು ಮರೆತು ಒಂದು ತೀವ್ರವಾದಂತಹ ಈ ಆಲಮಟ್ಟಿ ಜಲಾಶಯದ ಬಗ್ಗೆ ಅನ್ಯಾಯವಾಗಿದೆ. ಅವರು ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಬೇಕೆಂದು ಸರ್ವಪಕ್ಷದ ನಿಯೋಗ ಹೋಗಬೇಕೆಂದು ಹೇಳಿ ಸರ್ವಾನುಮತದಿಂದ ನಿರ್ಣಯವನ್ನು ತಂದಿದ್ದಾರೆ. ನಾನು ಅದನ್ನು ತೀವ್ರವಾಗಿ ವಿರೋಧಿಸುತ್ತೇನೆ. ಆಂಧ್ರಪ್ರದೇಶದ ಶಾಸನ ಸಭೆಗಳಲ್ಲಿ ನಡೆಯುವಂತಹ ಚರ್ಚೆ ಅದು ಒಂದು ರಾಜಕೀಯವಾದಂತಹ ಚರ್ಚೆಯಾಗಿದೆ. ಅನ್ಯಾಯವಾಗಿರತಕ್ಕಂಥದ್ದು ಪ್ರಮುಖವಾಗಿ ಕರ್ನಾಟಕದ ಜನತೆಗೆ. ಮೊದಲಿನಿಂದಲೂ ಅನ್ಯಾಯವನ್ನು ಕರ್ನಾಟಕದ ವಿರುದ್ಧ ಮಾಡುತ್ತಾ ಹೋಗುತ್ತಾ ಇರತಕ್ಕಂಥವರು ಆಂಧ್ರದವರು. ತೆಲಗುಗಂಗಾ ಯೋಜನೆಯನ್ನು ಹೇಳದೆ ಕೇಳದೆ, ಯಾರ ಗಮನಕ್ಕೂ ತರದೆ, ಕುಡಿಯುವ ನೀರಿನ ಯೋಜನೆಯನ್ನು ನೀರಾವರಿ ಯೋಜನೆಯನ್ನಾಗಿ ಪರಿವರ್ತನೆ ಮಾಡಿ ದಬ್ಬಾಳಿಕೆ ನೆಡೆಸಿದವರು ಆಂಧ್ರದವರು. ಆದರೆ ಇವತ್ತು ಆಲಮಟ್ಟಿ ಜಲಾಶಯದ ಎತ್ತರ ಜಾಸ್ತಿ ಮಾಡುತ್ತಾರೆಂದು ಮತ್ತೊಂದು ಗದ್ದಲ ಆಂಧ್ರ ಶಾಸನಸಭೆಯಲ್ಲಿ ನೆಡೆದಿದೆ. ಆ ಶಾಸನಸಭೆಯ ಬಗ್ಗೆ ನನಗೆ ಗೌರವಿಸಿದೆ, ಆ ಅಧ್ಯಕ್ಷರ ಬಗ್ಗೆ ನನಗೆ ಗೌರವವಿದೆ. ಆದರೆ ಈ ಅನ್ಯಾಯದ ಚರ್ಚೆಯನ್ನು ಚರ್ಚೆಯ ವಸ್ತುವಾಗುವುದಕ್ಕೆ ಅವರು ಅವಕಾಶವನ್ನು ಕೊಡಬಾರದಿತ್ತು. ಆಂಧ್ರ ಶಾಸನಸಭೆಯಲ್ಲಿ ಇದನ್ನು ಕೊಟ್ಟಿದ್ದು ನಿಜವಾಗಿ ಬಹಳ

ಅತ್ಯಂತ ಅನ್ಯಾಯ. ಈ ರೀತಿ ಕೊಡುತ್ತಾ ಹೋದರೆ ನಾವು ಕೂಡ ಆಂಧ್ರದ ಬಗ್ಗೆ ಅನೇಕ ಚರ್ಚೆಗಳನ್ನು ಇಲ್ಲಿ ಮಾಡಬೇಕಾಗುತ್ತದೆ. ಇದು ಸರಿಯಾದ ಮಾರ್ಗವಲ್ಲ. ಇವತ್ತು ನಾನು ಒಂದು ಸಲಹೆಯನ್ನು ಸಂಬಂಧಪಟ್ಟಂಥ ಭಾರಿ ನೀರಾವರಿ ಸಚಿವರಿಗೆ ತಮ್ಮ ಮೂಲಕ ಹೇಳುತ್ತಿದ್ದೇನೆ. ಜುರಾಲಾ ಯೋಜನೆಯನ್ನು ಇಪ್ಪತ್ತೈದನೆಯ ತಾರೀಖಿನಂದು ಅಲ್ಲಿನ ಮುಖ್ಯಮಂತ್ರಿಗಳು ಏನು ಉದ್ಘಾಟನೆ ಮಾಡುತ್ತಿದ್ದಾರೆ, ಅದನ್ನು ತಡೆಹಿಡಿಯಬೇಕೆಂದು ದೇಶದ ಪ್ರಧಾನಮಂತ್ರಿಗಳ ಹತ್ತಿರ ಕರ್ನಾಟಕದ ಸರ್ವಪಕ್ಷಗಳ ನಿಯೋಗವನ್ನು ಇಲ್ಲಿನ ಮುಖ್ಯಮಂತ್ರಿಗಳು ದೆಹಲಿಗೆ ಕರೆದುಕೊಂಡು ಹೋಗಬೇಕೆಂದು ನಾನು ತೀವ್ರವಾಗಿ ಒತ್ತಾಯ ಮಾಡುತ್ತಿದ್ದೇನೆ. ಏಕೆಂದರೆ, ಅಲ್ಲಿ ಅವರ ನಿಯೋಗ ಹೋಗುತ್ತಿದ್ದಾರೆ, ನಾವು ಕರ್ನಾಟಕದ ಪರವಾಗಿ ಜುರಾಲದಿಂದ ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ತಾವು ಮಧ್ಯಪ್ರವೇಶ ಮಾಡಬೇಕೆಂದು ಪ್ರಧಾನಮಂತ್ರಿಗಳ ಬಳಿಗೆ ಕರ್ನಾಟಕದ ಸರ್ವಪಕ್ಷಗಳ ನಿಯೋಗವನ್ನು ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರ ನಾಯಕತ್ವದಲ್ಲಿ, ಭಾರೀ ನೀರಾವರಿ ಸಚಿವರು ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳು ಹೋಗಬೇಕು. ತಕ್ಷಣವೇ ಇದನ್ನು ನಿಧಾನ ಮಾಡದೆ, ಅವರು ಇಪ್ಪತ್ತೈದನೆ ತಾರೀಖಿನಂದು ಉದ್ಘಾಟನೆ ಮಾಡುವಾಗ, ಕೂಡಲೇ ಆ ಮುಖ್ಯಮಂತ್ರಿಗಳಿಗೆ ಅದನ್ನು ತಡೆಹಿಡಿಯಬೇಕೆಂದು ಹೇಳಬೇಕು. ಈ ಬಗ್ಗೆ ಕರ್ನಾಟಕದವರಾಗಿರತಕ್ಕಂಥ ಪ್ರಧಾನಮಂತ್ರಿಗಳು ಮಧ್ಯ ಪ್ರವೇಶ ಮಾಡಬೇಕೆಂದು ನಾವು ಒತ್ತಾಯ ಮಾಡುವುದಕ್ಕೆ ತಕ್ಷಣ ಸರ್ವಪಕ್ಷಗಳ ನಿಯೋಗವನ್ನು ಕಳುಹಿಸಬೇಕೆನ್ನುವುದು ನನ್ನ ಅತ್ಯಂತ ಕಳಕಳಿಯ ಒತ್ತಾಯ. ಇದರ ಜೊತೆಗೆ, ಸ್ವಾಮಿ, ಈಗಾಗಲೇ ಅನೇಕರು ನನ್ನ ಸ್ನೇಹಿತರು ಹೇಳಿದ್ದಾರೆ, ನಾರದಮುನಿ ಮತ್ತು ದತ್ತಾತ್ರೇಯ ಮಂದಿರಗಳು, ಧಾರ್ಮಿಕ ಮಂದಿರಗಳು ಏನಿದ್ದಾವೆ ಇವಕ್ಕೆ ಒಂದು ಚರಿತ್ರ್ಯಕ ಹಿನ್ನೆಲೆ ಇದೆ. ಈ ಚರಿತ್ರೆಯನ್ನು ಅಳಿಸಿ ಹಾಕತಕ್ಕಂಥ ಈ ಜುರಾಲಾ ಜಲಾಶಯದ ಬಗ್ಗೆ ಕರ್ನಾಟಕದ ಸರ್ಕಾರ ತೀವ್ರ ಮಂದಗತಿಯಲ್ಲಿ ಹೊರಟಿದೆ ಎನ್ನತಕ್ಕಂಥ ಈ ಮಾತನ್ನು ವಿಧಿಯಿಲ್ಲದೆ ಹೇಳಬೇಕಾಗಿದೆ. ಈ ನಾರದಮುನಿ ಮತ್ತು ದತ್ತಾತ್ರೇಯ ಮಂದಿರಗಳನ್ನು ಕಟ್ಟುವುದಕ್ಕೆ ಇವರು ಯಾವ ಜಾಗವನ್ನು ಪಡೆದಿದ್ದಾರೆ? ಇದಕ್ಕಾಗಿ ಸರ್ಕಾರದಲ್ಲಿರತಕ್ಕಂಥ ಯೋಜನೆ ಏನು? ಈ ಧಾರ್ಮಿಕ ಸ್ಥಳಗಳನ್ನು ಕಟ್ಟುವುದಕ್ಕೆ ವಿನ್ಯಾಸವೇನಾದರೂ ತಯಾರಾಗಿದೆಯೇ? ಇದರಿಂದ ಕೇವಲ ಎರಡು ದೇವಸ್ಥಾನಗಳು ಮುಳುಗಡೆಯಾಗುವುದು ಒಂದೇ ಅಲ್ಲ, ಅನೇಕ ಸಣ್ಣ ಸಣ್ಣ ಗ್ರಾಮಗಳು ಮುಳುಗಡೆಯಗುತ್ತವೆ. ಹೀಗೆ ಮುಳುಗಡೆಯಾಗತಕ್ಕಂಥ ಪ್ರದೇಶವನ್ನು ಬಿಟ್ಟು ಜನರಿಗೆ ಬೇರೆ ಕಡೆ ಮಾಡತಕ್ಕಂಥ ವ್ಯವಸ್ಥೆ ಇದುವರೆವಿಗೂ, ಈ ಕ್ಷಣದವರೆವಿಗೂ ಸರ್ಕಾರ ಮಾಡಿಲ್ಲವೆಂದು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ, ಇಪ್ಪತ್ತೈದನೇ ತಾರೀಖು ಯಾರು ಏನೇ ಹೇಳಿದರು ಅವರು ಜಲಾಶಯವನ್ನು ಉದ್ಘಾಟನೆ ಮಾಡುತ್ತಾರೆ. ನಮ್ಮಲ್ಲಿ ನಾವು ಎಷ್ಟು ಎಚ್ಚರವನ್ನು ವಹಿಸಿದ್ದೇವೆ ಎನ್ನುವುದರ ಬಗ್ಗೆ ನೋಡಿದಾಗ, ನಮ್ಮ ಎಚ್ಚರದಲ್ಲಿ ತೀವ್ರತೆ ಇಲ್ಲ. ಆದುದರಿಂದ ಕರ್ನಾಟಕ ಸರ್ಕಾರ ಬರೀ ಹೇಳಿಕೆಯನ್ನು

ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ಆಂಧ್ರಪ್ರದೇಶದ ನೀತಿಯ ವಿರುದ್ಧ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು, ಆಂಧ್ರಪ್ರದೇಶದ ನೀತಿಯನ್ನು ಪ್ರತಿಭಟನೆ ಮಾಡಬೇಕು. ಆಂಧ್ರಪ್ರದೇಶದವರು ಏನು ತಿಳಿದುಕೊಂಡಿದ್ದಾರೆಂದರೆ, ಆಂಧ್ರವಾಗಬಹುದು, ಮಾನ್ಯ ಅಧ್ಯಕ್ಷರೆ, ನೀರಾವರಿಯ ಬಗ್ಗೆ ನಾವು ಮೊದಲಿನಿಂದಲು ನೋಡುತ್ತಿದ್ದೇವೆ, ಕಾವೇರಿಯ ಬಗ್ಗೆಯಾಗಲಿ, ಕೃಷ್ಣಾದ ಬಗ್ಗೆಯಾಗಲಿ, ಕರ್ನಾಟಕದ ರಾಜ್ಯವನ್ನು ಒಂದು ರೀತಿಯ ಧರ್ಮಛತ್ರದ ರೀತಿ ಮೊದಲಿನಿಂದಲೂ ತಿಳಿದುಕೊಂಡಿದ್ದಾರೆ. ಕರ್ನಾಟಕವನ್ನು ಯಾರು ಕೇಳುವವರಿಲ್ಲ, ನಾವು ಏನು ಬೇಕಾದರೂ ಮಾಡಬಹುದು ಎನ್ನತಕ್ಕಂಥ ಭಾವನೆ ಬರುವುದಕ್ಕೆ ನಮ್ಮಲ್ಲಿ ರಾಜಕೀಯ ಮುಖಂಡತ್ವ, ಅವರು ಯಾವುದೇ ರಾಜಕೀಯ ಪಕ್ಷವಾಗಿರಬಹುದು, ರಾಜಕೀಯ ಮುಖಂಡತ್ವದ ಶಕ್ತಿ ಇವತ್ತು ಕುಂದಿರುವುದರಿಂದ ಇವತ್ತು ಕರ್ನಾಟಕದ ಮೇಲೆ ಈ ರೀತಿಯಾದಂಥ ಒಂದು ದಾಳಿ ನಡೆಯುತ್ತಿದೆ. ಇದನ್ನು ತಪ್ಪಿಸುವುದಕ್ಕೆ ನಾವು ಪರಿಣಾಮಕಾರಿಯಾಗಿ ಪ್ರಯತ್ನ ಮಾಡಬೇಕು. ಇವತ್ತು ಖರ್ಗೆಯವರು ಮಣ್ಣಿನ ಮಗ ಎಂದು ಹೇಳಿದರು. ಈಗಿನ ಮುಖ್ಯಮಂತ್ರಿಗಳೂ ಮಣ್ಣಿನ ಮಕ್ಕಳೆ. ಒಂದು ಸಾರಿ, ನಾನು ಈ ಸಂದರ್ಭದಲ್ಲಿ ಹೇಳುವಾಗ ಹಾಸ್ಯವಾಗಬಹುದು. ಜಿಂದಾಲ್ ಆಸ್ಪತ್ರೆಯಲ್ಲಿ ನಮ್ಮ ಈಗಿನ ಮುಖ್ಯಮಂತ್ರಿಗಳು, ಸುಮಾರು ಎರಡು ತಿಂಗಳು, ಮೂರು ತಿಂಗಳು ಹಿಂದೆ ಅಲ್ಲಿದ್ದರು. ಆಗ ಅಲ್ಲಿ ಈ ಮಣ್ಣಿನ ಸ್ನಾನ ಎಂದು ಮಾಡಿಸುತ್ತಾರೆ. ನಮ್ಮ ಈಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಜೆ.ಹೆಚ್.ಪಟೇಲರು ಮೈತುಂಬಾ ಮಣ್ಣನ್ನು ಹಚ್ಚಿಕೊಂಡಿದ್ದರು. ಎಲ್ಲರು ಬೇರೆಯವರನ್ನು ''ಮಣ್ಣಿನ ಮಗ'' ''ಮಣ್ಣಿನ ಮಗ'' ಎಂದು ಹೇಳುತ್ತಾರೆ, ನನ್ನನ್ನು ನೋಡಿ ನಾನು ನಿಜವಾಗಿ ''ಮಣ್ಣಿನ ಮಗ'' ಎಂದು ಹೇಳಿದರು. ಹಾಗೆ ಮೈ ತುಂಬಾ ಮಣ್ಣನ್ನು ಹಚ್ಚಿಕೊಂಡಿದ್ದರು. ಅಂದರೆ, ಇದರ ಅರ್ಥ, ಮಣ್ಣಿನ ಮಗ ಎನ್ನುವುದು ಕೆಲವೊಬ್ಬರಿಗೆ ಎಂದಿಲ್ಲ. ಮಾತು ಎತ್ತಿದರೆ ಮಣ್ಣಿನ ಮಕ್ಕಳು ಎನ್ನುವುದು ನಿರ್ಧಾರವಾಗಿಬಿಟ್ಟಿದೆ. ಇದು, ಮಣ್ಣಿನ ಮಗ ಎಂದು ಅದರ ರಕ್ಷಣೆಯಲ್ಲಿ ಕರ್ನಾಟಕದ ಕತೆಯನ್ನು ಮುಗಿಯುವುದಕ್ಕೆ ಬಿಡಬಾರದು. ಕರ್ನಾಟಕದ ಒಂದು ಚರಿತ್ರೆ ಮಹತ್ತರವಾಗಿದೆ, ಕರ್ನಾಟಕದ ಹಕ್ಕಿಗಾಗಿ ನಿರಂತರವಾಗಿ ಹೋರಾಟ ಮಾಡಬೇಕು ಎನ್ನತಕ್ಕಂಥದ್ದು ನನ್ನ ಒತ್ತಾಯ. ಇಷ್ಟನ್ನು ಹೇಳಿ, ಅಧ್ಯಕ್ಷರೆ, ತಮ್ಮ ಮೂಲಕ ತೆಲಗು ಗಂಗಾ, ಜುರಾಲ ಇದರ ವಿರುದ್ಧ, ನಾನು ಆಂಧ್ರ ಪ್ರದೇಶದ ನೀತಿಯನ್ನು ಪ್ರತಿಭಟನೆ ಮಾಡುತ್ತೇನೆ. ಆಲಮಟ್ಟಿ ಜಲಾಶಯದ ಎತ್ತರವನ್ನು ಹೆಚ್ಚಿಸಬಾರದೆಂದು ಹೇಳತಕ್ಕಂಥ ಹಕ್ಕು ಅವರಿಗಿಲ್ಲ. ಇದು ಅತ್ಯಂತ ಅನ್ಯಾಯ ಮತ್ತು ತೀರ, ಘೋರ, ಪರಮ ಪ್ರತಿಭಟನೆ ಅವರದಾಗಿದೆ, ಅದರ ವಿರುದ್ಧ ನನ್ನ ಪ್ರತಿಭಟನೆ ಇದೆ. ಇದರ ಜೊತೆಗೆ ಪ್ರಾಮಾಣಿಕವಾಗಿರತಕ್ಕಂಥ ವಿಚಾರವನ್ನು, ಅಕ್ರಮವಾಗಿ ಚರ್ಚೆಗೆ ಆಂಧ್ರಪ್ರದೇಶದ ಶಾಸನ ಸಭೆ ತೆಗೆದುಕೊಂಡಿರತಕ್ಕಂಥದ್ದು ಅತ್ಯಂತ ಅನ್ಯಾಯ. ಇದರ ವಿರುದ್ಧ ನಾನು ಕರ್ನಾಟಕದ ಜನತೆಯ ಪರವಾಗಿ ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಬಹಳ ಅನ್ಯಾಯ, ಇದು ಆಗಬಾರದು ಎನ್ನತಕ್ಕಂಥ ನೀತಿಯನ್ನು ನಾನು ಹೇಳಿ, ಆಂಧ್ರಪ್ರದೇಶ ಸರ್ಕಾರ

ತೆಗೆದುಕೊಂಡಿರತಕ್ಕಂಥ ನಿಲುವು ಸರಿಯಾದ ನಿಲುವಲ್ಲ. ಆಂಧ್ರಪ್ರದೇಶದ ಸರ್ಕಾರದ ಅನ್ಯಾಯ, ಆಂಧ್ರಪ್ರದೇಶ ಶಾಸನಸಭೆಯಲ್ಲಿ ನಡೆಯುತ್ತಿರತಕ್ಕಂಥ ಇದೊಂದು ಮೋಸ, ಇದು ಕರ್ನಾಟಕ ಜನತೆಗೆ ನಿಜವಾಗಿ ಮಾಡತಕ್ಕಂಥ ಅತ್ಯಂಥ ಅಪಚಾರ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಆಂಧ್ರಪ್ರದೇಶದ ಸರ್ಕಾರವು ತೆಲಗುಗಂಗಾಗೆ ಸಂಬಂಧಿಸಿದಂತೆ ಈ ನೀತಿಯನ್ನು ತಂದಿದ್ದಾಗ ಕರ್ನಾಟಕದ ಸರ್ಕಾರವು ಕಣ್ಣುಮುಚ್ಚಿಕೊಂಡು ಕುಳಿತಿರುವ ನೀತಿಯು ಸರಿಯಲ್ಲವೆಂದು ಈ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು:- ಊಟದ ಸಮಯವಾಗಿದೆ ತಾವು ಸಂಕ್ಷಿಪ್ತವಾಗಿ ಹೇಳಿ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೆಪಲ್ಲಿ):- ಸನ್ಮಾನ್ಯ ಅಧ್ಯಕ್ಷರೆ, ಜುರಾಲದ ಬಗ್ಗೆ ಸಾಕಷ್ಟು ವಿಷಯಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ಇದರಲ್ಲಿ ಮುಖ್ಯವಾಗಿರತಕ್ಕಂಥ ಎರಡು ಅಂಶಗಳೇನೆಂದರೆ, ಜುರಾಲಾ ಅಣೆಕಟ್ಟೆಯಿಂದಾಗಿ ಮುಳುಗಡೆಯಾಗಿರತಕ್ಕಂಥ ಪ್ರದೇಶಗಳ ಬಗ್ಗೆ ಚರ್ಚಾಸ್ಪದವಾಗಿದೆ. ಸರ್ಕಾರ ಹೇಳುತ್ತಿರತಕ್ಕಂಥದ್ದು, 576 ಎಕರೆ ಜಮೀನು ಮಾತ್ರ ಮುಳುಗಡೆಯಗುತ್ತಿದೆ. ಆದರೆ ಅಲ್ಲಿ ವಾಸ್ತವವಾಗಿರುತಕ್ಕಂಥ ಪರಿಸ್ಥಿತಿ, ರಾಯಚೂರು ಜಿಲ್ಲೆಯ ಜನರು, ಈ 576 ಎಕರೆ ಜಮೀನು ಮುಳುಗಡೆಯಾಗುತ್ತಿದೆ ಎಂದು ಸರ್ಕಾರ ಏನು ಹೇಳುತ್ತಿದೆ ಇದು ಸತ್ಯಕ್ಕೆ ದೂರವಾದಂಥ ವಿಷಯ. ಕನಿಷ್ಟ ಎಂದರೂ 2,000 ಎಕ್ಕರೆಯಷ್ಟು ಜಮೀನು ಮುಳುಗಡೆಯಾಗುತ್ತದೆ ಎಂದು ಹೇಳುತ್ತಿದ್ದಾರೆ. ಹೀಗೆ ಮುಳುಗಡೆಯಾಗತಕ್ಕಂಥ ಭೂಮಿಯಲ್ಲಿ ಕೃಷಿ ಭೂಮಿಯು ಇದೆ, ಕೃಷಿಯೇತರ ಭೂಮಿಯು ಇದೆ. ಕೃಷಿ ಭೂಮಿ ಎಂದರೆ, ಅಲ್ಲಿ ಈಗ ಮುಳುಗಡೆಗೆ ಒಳಗಾಗಿರತಕ್ಕಂಥ, ಸಣ್ಣ ಸಣ್ಣ ದ್ವೀಪಗಳಲ್ಲಿರತಕ್ಕಂಥ ರೈತರು ಏನಿದ್ದಾರೆ ಅವರ ಭೂಮಿ ಮುಳುಗಡೆಯಾಗುತ್ತಿದೆ. ಅದರ ಬಗ್ಗೆ ನಿಖರವಾದಂಥ ಅಂದರೆ ಈ ಮುಳುಗಡೆಯಾಗುತ್ತಿರತಕ್ಕಂಥ ಭೂಮಿಯಲ್ಲಿ ಕೃಷಿ ಭೂಮಿ ಎಷ್ಟು ಮುಳುಗಡೆಯಾಗುತ್ತಿದೆ, ಕೃಷಿಯೇತರ ಭೂಮಿ ಎಷ್ಟು ಮುಳುಗಡೆಯಾಗುತ್ತಿದೆ ಎನ್ನುವುದರ ಬಗ್ಗೆ ಸರ್ಕಾರ ಖಚಿತವಾದ ಮಾಹಿತಿಯನ್ನು ಇವತ್ತಿಗೂ ಕೂಡ ಈ ಸದನಕ್ಕೆ ಕೊಟ್ಟಿಲ್ಲ.

2. 10 ಪಿ.ಎಂ.

ಅಂದರೆ ಕೃಷಿ ಭೂಮಿ ಎಷ್ಟು ಮುಳುಗಡೆಯಾಗುತ್ತದೆ, ಕೃಷಿಯೇತರ ಭೂಮಿ ಎಷ್ಟು ಮುಳುಗಡೆಯಾಗುತ್ತದೆ ಎನ್ನತಕ್ಕಂಥಾದ್ದು. ಇನ್ನೊಂದು ವಿಷಯವೆಂದರೆ ಮುಳುಗಡೆ ಆಗತಕ್ಕಂಥ ಭೂಮಿಯ ಬಗ್ಗೆಯೇ ವಿವಾದ ಇದೆ. 576 ಎಕರೆ ಎಂದು ಇವರು ಹೇಳುತ್ತಾರೆ, 576 ಎಕರೆಗಿಂತ ಹೆಚ್ಚು ಮುಳುಗಡೆಯಾಗಿದೆ ಎಂದು ರಾಯಚೂರು

ಜಿಲ್ಲೆಯಲ್ಲಿರತಕ್ಕಂಥ ಸಾಮಾನ್ಯ ಜನ ಮಾತನಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಖಚಿತವಾದಂಥ ಒಂದು ಸ್ಪಷ್ಟ ಮಾಹಿತಿಯನ್ನು ಇವತ್ತು ಕರ್ನಾಟಕ ರಾಜ್ಯದ ಜನತೆಗೆ ಕೊಡಬೇಕಾಗಿದೆ. ಏಕೆಂದರೆ ಇದರ ಬಗ್ಗೆ ತಪ್ಪು ಮಾಹಿತಿ ಗ್ರಹಿಕೆಯಾಗುತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ತಪ್ಪಲ್ಲ, ನಿಜ. ಅವರು 576 ಎಕರೆ ಮುಳುಗಡೆಯಾಗುತ್ತದೆ ಎಂದು ಏನು ಕ್ಯಾಲ್‌ಕುಲೇಷನ್ ಮಾಡಿದ್ದಾರೆ ಅದು ನಿಜ. ಆದರೆ ಯಾವಾಗ ಡ್ಯಾಂನ ಎತ್ತರ 318 ಇದ್ದದ್ದು 319 ಮೀಟರ್‌ಗೆ ಎತ್ತರವಾಯಿತೋ, ಆಗ ಆಟೋಮೆಟಿಕಲಿ ಅಷ್ಟು ವಿಸ್ತೀರ್ಣ ಹೆಚ್ಚು ಆಗಲೇಬೇಕಲ್ಲ. ಆದರೆ ಅವರು ಇಲ್ಲಿ ರೀಸರ್ವೇಯನ್ನು ಮಾಡಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಆದ್ದರಿಂದ ಸನ್ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಇದರ ಬಗ್ಗೆ ಸ್ಪಷ್ಟವಾದಂಥ ಮಾಹಿತಿಯನ್ನು ಕೊಡಬೇಕಾಗುತ್ತದೆ ಒಂದು ಮೀಟರ್ ಎತ್ತರ ಜಾಸ್ತಿಯಾದಾಗ ಮುಳುಗಡೆಯಾಗಲಿರುವ ಪ್ರದೇಶ ಸರ್ವೇಸಾಮಾನ್ಯವಾಗಿ ಹೆಚ್ಚಾಗುತ್ತದೆ, ಮಾನ್ಯ ನೀರಾವರಿ ಮಂತ್ರಿಗಳು ಇದನ್ನು ಗಮನಿಸಬೇಕು, ಅವರು ಎಲ್ಲಿಗೋ ಹೋಗುತ್ತಿದ್ದಾರೆ. ಈಗ ಈ ಮಾಹಿತಿ ಸ್ಪಷ್ಟವಾಗಿ ಬೇಕಾಗಿದೆ. ಸರ್ಕಾರ ಕೊಡತಕ್ಕಂಥ ಅಂಕಿಅಂಶಗಳನ್ನು ಒಪ್ಪಲು ಖಂಡಿತಾ ಸಾಧ್ಯವಿಲ್ಲ. 318 ಆದಾಗ ಜಾಸ್ತಿಯಾಗಿಯೇ ಆಗುತ್ತದೆ. ಆದರೆ ಅದು ಎಷ್ಟು ಎನ್ನತಕ್ಕಂಥ್ದಾನ್ನು ಹೇಳಬೇಕು. ಎರಡನೇ ಅಂಶ ಎಂದರೆ, ಇದರಲ್ಲಿ ಕೃಷಿ ಭೂಮಿ ಎಷ್ಟು? ಕೃಷಿಯೇತರ ಭೂಮಿ ಎಷ್ಟು? ಕೃಷಿ ಭೂಮಿ ಮುಳುಗಡೆಯಾದರೆ, ಕೃಷಿಯ ಮೇಲೆ ಅವಲಂಬಿತರಾಗಿದ್ದಂಥ ಆ ಕುಟುಂಬಗಳಿಗೆ ಪರ್ಯಾಯ ಕೃಷಿ ಭೂಮಿಯನ್ನು ಸರ್ಕಾರ ಒದಗಿಸುವುದಕ್ಕೆ ಯಾವ ರೀತಿಯಾದಂಥ ಕಾರ್ಯಕ್ರಮವನ್ನು ಹಾಕಿದೆ. ಇದುವರೆಗೂ ಎಷ್ಟು ಭೂಮಿಯನ್ನು ಕೃಷಿ ಮಾಡತಕ್ಕಂಥ ಜನರಿಗೆ ಅವರು ಹಂಚಿಕೆ ಮಾಡಿದ್ದಾರೆ ಅಥವಾ ಹಂಚಿಕೆ ಮಾಡಬೇಕಾದರೆ ಅಲ್ಲಿ ಕೃಷಿಗೆ ಯೋಗ್ಯವಾಗಿರತಕ್ಕಂಥ ಭೂಮಿ ಆ ಪ್ರದೇಶದಲ್ಲಿ ಇದೆಯೇ ಅಥವ ಇಲ್ಲವೇ? ಎನ್ನತಕ್ಕಂಥಾದ್ದರ ಬಗ್ಗೆ ಕೂಡ ಸರ್ಕಾರ ಇದುವರೆಗೂ ಯಾವುದೇ ಸ್ಪಷ್ಟವಾದಂಥ ಮಾಹಿತಿಯನ್ನು ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟಿಲ್ಲ. ಇನ್ನು ಮೂರನೇ ಅಂಶ, ವಿವಾದಕ್ಕೆ ಒಳಗಾಗಿರತಕ್ಕಂಥಾದ್ದು ಎಂದರೆ ಈಗ ಬಚಾವತ್ ವರದಿಯ ಆಧಾರದ ಮೇಲೆ, ಅವಾರ್ಡಿನ ಆಧಾರದ ಮೇಲೆ ಆಂಧ್ರದವರ ನೀರು ಎಷ್ಟು ಪಾಲು ಇತ್ತು, ಅವರು ಅದನ್ನು ಹೆಚ್ಚು ಕಡಿಮೆ ಸಂಪೂರ್ಣವಾಗಿ ಉಪಯೋಗಿಸಿಕೊಂಡಿದ್ದಾರೆ. ಇನ್ನು 11 ಟಿ.ಎಂ.ಸಿ. ನೀರಿನ ಹಕ್ಕು ಮಾತ್ರ ಅದರಲ್ಲಿ ಅವರಿಗೆ ಉಳಿದಿದೆ. ಆ 11 ಟಿಎಂಸಿ ನೀರನ್ನು ಶೇಖರಣೆ ಮಾಡಲಿಕ್ಕೆ ಜುರಾಲಾ ಅಣೆಕಟ್ಟನ್ನು ಕಟ್ಟಿದ್ದಾರೆ. ಆದರೆ ಅದರ ಕೆಪಾಸಿಟಿ ಇವತ್ತು 18 ಟಿಎಂಸಿ ನೀರನ್ನು ಹಿಡಿಯುವಷ್ಟು ಇದೆ. ಆದ್ದರಿಂದ ಅವರು ಅವರ ಪಾಲಿನ ನೀರು ಕಷ್ಣಾದಲ್ಲಿ ಎಷ್ಟು ಇದೆ, ಅದಕ್ಕಿಂದ ಹೆಚ್ಚು ಅದರಲ್ಲಿ ಸ್ಟೋರ್ ಮಾಡಿಕೊಳ್ಳತಕ್ಕಂಥ ಅವಕಾಶಗಳು ಇವೆ ಎನ್ನತಕ್ಕಂಥಾದ್ದು ಒಂದು. ಈ ಸಮಸ್ಯೆ ಇರುವುದರಿಂದ, ಇನ್ನೊಂದು ವಿಷಯ ಎಂದರೆ

ಈಗಾಗಲೇ ಅವರು ಒಂದು ಮೀಟರ್ ಎತ್ತರವನ್ನು ಈಗಾಗಲೇ ಏರಿಸಿಬಿಟ್ಟಿದ್ದಾರೆ. ಅವರು ಒಂದು ಮೀಟರ್ ಎತ್ತರ ಏರಿಸುವಾಗ ನಮ್ಮ ಕರ್ನಾಟಕ ಸರ್ಕಾರ ಏನು ಮಾಡುತ್ತಿತ್ತು? ಅವರಿಗೆ ಪ್ಲಾನಿಂಗ್ ಕಮೀಷನ್ ಮತ್ತು ಸೆಂಟ್ರಲ್ ವಾಟರ್ ರಿಸೋರ್ಸ್ ಕಮೀಷನ್‌ರವರು ಎಷ್ಟು ಮೀಟರ್ ಎತ್ತರಕ್ಕೆ ಅನುಮತಿ ಕೊಟ್ಟಿದ್ದಾರೆ. ಆ ಅನುಮತಿ ಕೊಟ್ಟಿರುವುದಕ್ಕಿಂತ ಒಂದು ಮೀಟರ್ ಹೆಚ್ಚಾಗಿ ಅವರು ಕಟ್ಟಡವನ್ನು ಕಟ್ಟಿದ್ದರೆ, ನಮ್ಮ ಕರ್ನಾಟಕ ಸರ್ಕಾರ ಏನು ಮಾಡುತ್ತಿತ್ತು? ಇದು ಬಹಳ ಮುಖ್ಯವಾದಂಥ ಅಂಶ. ಒಂದು ಮೀಟರ್ ಎತ್ತರ ಹೆಚ್ಚು ಮಾಡುವಾಗ ಅವರಿಗೆ ಅನುಮತಿ ಕೊಟ್ಟಿರತಕ್ಕಂಥಾದ್ದು 318 ಮೀಟರ್ ಎಂದು ಆದರೆ, ಒಂದು ಮೀಟರ್ ಹೆಚ್ಚು ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ಮಾಡಿರತಕ್ಕಂಥ ಕಾರಣಕ್ಕೋಸ್ಕರ ಈಗ ಅವರು ಒಂದು ಮೀಟರ್ ಹೆಚ್ಚಿಗೆ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟಂಥ ಜವಾಬ್ದಾರಿಯಿರತಕ್ಕಂಥ ಅಧಿಕಾರಿ ಯಾರಿದ್ದಾರೆ, ಯಾರು ಅಲ್ಲಿ ಜವಾಬ್ದಾರಿ ವಹಿಸಿದ್ದರೋ ಅವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥಾದ್ದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಸಾಮಾನ್ಯವಾಗಿ ಅಂತರ್‌ರಾಜ್ಯ ನದಿ ನೀರಿನ ವ್ಯವಹಾರಗಳು ಬಂದಾಗ ಭಾವೋದ್ವೇಗಕ್ಕೆ ಎಡೆ ಮಾಡಿಕೊಡತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡತಕ್ಕಂಥ ಕೆಲಸವನ್ನು ಯಾವುದೇ ರಾಜ್ಯವೂ ಕೂಡ ಮಾಡಬಾರದು. ಅದನ್ನು ಕರ್ನಾಟಕವೂ ಮಾಡಬಾರದು, ಆಂಧ್ರದವರೂ ಕೂಡ ಮಾಡಬಾರದು. ಹಾಗೆ ಮಾಡುವುದರಿಂದ ಏನಾಗುತ್ತದೆ ಎಂದರೆ ವಾತಾವರಣ ಸಂಪೂರ್ಣವಾಗಿ ಹದಗೆಟ್ಟು ಸಮಸ್ಯೆಯ ಪರಿಹಾರಕ್ಕೆ ಸಾಧ್ಯವಾಗದೇ ಹೋಗತಕ್ಕಂಥ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ನಾನು ಎರಡೂ ರಾಜ್ಯಗಳ ಮುಖಂಡರುಗಳಲ್ಲಿ, ವಿರೋಧ ಪಕ್ಷದವರಲ್ಲಿ ಮತ್ತು ಆಡಳಿತ ಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ ಸೌಹಾರ್ದಯುತವಾಗಿರಬೇಕು, ವಾತಾವರಣವನ್ನು ಕೆಡಿಸತಕ್ಕಂಥ ಪ್ರಯತ್ನವನ್ನು ಎರಡು ರಾಜ್ಯಗಳೂ ಮಾಡಬಾರದು. ಇದು ಸೂಕ್ಷ್ಮವಾದಂಥ ವಿಷಯ. ಆ ರೀತಿ ಏನಾದರೂ ಸಮಸ್ಯೆಯಾಗಿದ್ದರೆ ಇವತ್ತು ಸರ್ಕಾರ, ಕಾನೂನು ಪ್ರಕಾರವಾಗಿ ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಅವರು ಒಂದು ಮೀಟರ್ ಎತ್ತರವನ್ನು ಹೆಚ್ಚು ಮಾಡುವಾಗ ಸುಮ್ಮನೆ ಇದ್ದಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ಒಂದು ಅಂಶ. ಎರಡನೇ ಅಂಶವೆಂದರೆ ಮುಳುಗಡೆಯಾಗತಕ್ಕಂಥ ಪ್ರದೇಶಗಳ ಬಗ್ಗೆ ಸರಿಯಾದಂಥ ಮಾಹಿತಿಯನ್ನು ಕೊಡಬೇಕು. ಇಷ್ಟನ್ನು ಮಾಡುವಾಗ ನೀವು ಇವತ್ತು ಆಂಧ್ರ ಸರ್ಕಾರದ ಜೊತೆ ಕುಳಿತುಕೊಂಡು ಚರ್ಚೆ ಮಾಡಿ, ಈ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಬೇಕು ಎನ್ನುವುದು ನನ್ನ ಕಳಕಳಿಯ ಮನವಿಯಾಗಿದೆ. ಏಕೆಂದರೆ ಈ ಪರಿಸ್ಥಿತಿಯನ್ನು ಹೀಗೇ ಬಿಟ್ಟರೆ ನಾಳೆ ದಿವಸ ಅದರಿಂದ ಹಲವಾರು ಸಮಸ್ಯೆಗಳು, ರಾಜ್ಯರಾಜ್ಯಗಳ ನಡುವೆ ಭಿನ್ನಾಭಿಪ್ರಾಯ, ಘರ್ಷಣೆಗಳಿಗೆ ಎಡೆಮಾಡಿಕೊಡುತ್ತದೆ. ಅದಕ್ಕೆ ಅವಕಾಶ ಮಾಡಿಕೊಡದ ರೀತಿಯಲ್ಲಿ ಮತ್ತು ಕರ್ನಾಟಕ ರಾಜ್ಯ ತನ್ನ ನಿಜವಾದ

ಹಕ್ಕನ್ನು ಮತ್ತು ನಮ್ಮ ರಾಜ್ಯದ ನಿಜವಾದ ಹಕ್ಕನ್ನು ಉಳಿಸಿಕೊಳ್ಳಲಿಕ್ಕೆ, ನಮ್ಮ ಜನತೆಯ ಹಿತವನ್ನು ಕಾಪಾಡಲಿಕ್ಕೆ ಸರಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಸನ್ಮಾನ್ಯ ಉಪಾಧ್ಯಕ್ಷರೆ, ಮೊದಲನೇ ವರದಿ ಪ್ರಜಾವಾಣಿಯಲ್ಲಿ ರಾಯಚೂರು ವರದಿಗಾರರಿಂದ ಬಂದಾಗ ಜುರಾಲಾ ಸಮಸ್ಯೆ ಶುರುವಾಗಿ, ಇಂದು ಈ ರಾಜ್ಯದಲ್ಲಿ ಏನಾಗಿದೆ ಎಂದರೆ ನಮ್ಮ ಮನೆಯಲ್ಲಿ ಒಂದು ಅಥವಾ ಒಂದೂವರೆ ತಿಂಗಳ ಹಿಂದೆ ಒಂದು ಹಸುವನ್ನು ತೆಗೆದುಕೊಂಡು ಬಂದೆವು. ನಾಗೇಗೌಡರೂ ಮಂತ್ರಿಯಾಗಿ ಒಂದು ತಿಂಗಳ ಮೇಲೆ 10 ದಿವಸ ಆಯಿತು. ಅದು ಒಂದು ಒಳ್ಳೆಯ ಹೋರಿ ಕರುವನ್ನು ಹಾಕಿತು. ಆ ಕರು ಕುಡಿಯುವುದಕ್ಕೆ ಹೋದರೆ ಆ ತಾಯಿ ಹಸು ಯಾವಾಗಲೂ ಹಾಲು ಕೊಡುವುದೇ ಇಲ್ಲ. ಆದರೆ ಕರೆಯುವುದಕ್ಕೆ ಹೋದವರಿಗೆ ಖಾಯಂ ಆಗಿ ಹಾಲು ಕೊಡುತ್ತದೆ. ಅಂದರೆ ಮೂರು ಸಲವೂ ಪ್ರಯತ್ನ ಪಟ್ಟು, ಮೂರು ಸಲವೂ ಸರಿಯಾಗಿ ಹಾಲು ಕುಡಿಯದೇ ಕರು ಬಡವಾಯಿತು. ಹಾಲು ಕರೆದುಕೊಂಡು ಕುಡಿಯುವವರು ಮಾತ್ರ ಬಹಳ ಚೆನ್ನಾಗಿ ಆದರು. ಆ ರೀತಿಯಾಗಿದೆ, ನಮ್ಮ ರಾಜ್ಯದ ಪರಿಸ್ಥಿತಿ. ಮೂರು ಪ್ರಮುಖವಾದ ವಿಷಯಗಳನ್ನು ನಾವು ಗಂಭೀರವಾಗಿ ಚಿಂತನೆ ಮಾಡಬೇಕು. ಒಂದು, ರಾಜ್ಯರಾಜ್ಯಗಳ ನಡುವೆ ಇರತಕ್ಕಂಥ ಒಪ್ಪಂದವನ್ನು ಮುರಿದು ಆಂಧ್ರದವರು ಒಂದು ಮೀಟರ್ ಎತ್ತರ ಹೆಚ್ಚು ಮಾಡುತ್ತಿರುವುದು. ಎರಡನೆಯದು ವಿದ್ಯುಚ್ಛಕ್ತಿ ಅಭಾವದ ಬಗ್ಗೆ ಕರ್ನಾಟಕ ಸರ್ಕಾರದ ಬೇಜವಾಬ್ದಾರಿತನ. ಮೂರನೆಯದು, ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಒಂದು ವರ್ಷದ ಹಿಂದೆ ವಿರೋಧ ಪಕ್ಷದ ಎಲ್ಲಾ ಸದಸ್ಯರನ್ನೂ ಕರೆದು, ನಮ್ಮ ಸರ್ಕಾರ ರೀಹ್ಯಾಬಿಲಿಟೇಷನ್ ಬಗ್ಗೆ ಅತ್ಯಂತ ಜವಾಬ್ದಾರಿಯಾಗಿ ಕಾರ್ಯ ನಿರ್ವಹಣೆ ಮಾಡುತ್ತದೆ. ಇದುವರೆಗೂ ಯಾವುದೇ ಸರ್ಕಾರ ಮಾಡಿಲ್ಲ. ಅದಕ್ಕೋಸ್ಕರ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡುತ್ತದೆ, ಆದರಿಂದ ರೈತರಿಗೆ ರೀಹ್ಯಾಬಿಲಿಟೇಷನ್ ನಿಯಮಾವಳಿ ಪ್ರಕಾರ ಯಾವ ರೀತಿಯಾಗಿ ಸವಲತ್ತುಗಳನ್ನು ಕೊಡಬೇಕು, ಆ ಕೆಲಸವನ್ನು ಮಾಡುತ್ತದೆ ಎಂದು ಹೇಳಿ ನಮ್ಮನ್ನೆಲ್ಲಾ ಮೀಟಿಂಗ್ ಕರೆದು, ವಿಶೇಷ ಅಧಿಕಾರಿಗಳನ್ನು ನೇಮಕ ಮಾಡುತ್ತೇವೆ ಎಂದು ಹೇಳಿದರು, ಆಲಮಟ್ಟಿ ಅಣೆಕಟ್ಟಿನ ವಿಷಯಕ್ಕೆ. ಜೊತೆಗೆ ಇನ್ನೊಂದು ವಿಷಯ ಪತ್ರಿಕೆಯಲ್ಲಿ ವರದಿಯಾಗಿದೆ, ಈಗ ಇರತಕ್ಕಂಥ ಮುಖ್ಯ ಮಂತ್ರಿಯವರಿಗೂ, ಪ್ರಧಾನಮಂತ್ರಿಯವರಿಗೂ ಈ ವಿಚಾರದಲ್ಲಿ ಮಹಾರಾಷ್ಟ್ರದ ಜನ ಹೋಗಿ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ, ಎರಡು ದೇವಸ್ಥಾನಗಳು ಮುಳುಗಡೆಯಾಗುವ ಬಗ್ಗೆ. ಈ ವಿಚಾರದಲ್ಲಿ ಪ್ರಧಾನಮಂತ್ರಿಯವರಿಗೂ ಮುಳುಗಡೆಯಾಗಿದೆ ಎಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಆದ್ದರಿಂದ ಆಂಧ್ರ ಸರ್ಕಾರ ನಿಯಮಾವಳಿಯನ್ನು ವಿರೋಧ ಮಾಡಿ ತನ್ನ ಸರ್ವಾಧಿಕಾರಿ ಪ್ರವೃತ್ತಿಯನ್ನು ಬೆಳೆಸಿರುವುದರಿಂದ, ರಾಜ್ಯರಾಜ್ಯಗಳು ವಿಶ್ವಾಸ ಕಳೆದುಕೊಳ್ಳತಕ್ಕಂಥ ವಿಚಾರ ಉದ್ಭವವಾಗಿರುತ್ತದೆ, ಜೊತೆಗೆ ಕರ್ನಾಟಕ ಸರ್ಕಾರದವರ ಜೊತೆ 500 ಕೋಟಿ

ವಿದ್ಯುಚ್ಛಕ್ತಿ ಯೋಜನೆ ಇದೆ ಇಬ್ಬರಿಂದ 500ಕೋಟಿ ರೂ.ಗಳ ಪ್ರಾಜೆಕ್ಟ್ ಇದು. ಸುಮಾರು 240 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಬಹಳ ವಿಧಾನಗತಿಯಲ್ಲಿ, ಮಂದಗತಿಯಲ್ಲಿ ನಡೆಸುತ್ತಿರುವುದರಿಂದ, ಈ ಎಲ್ಲಾ ವಿಚಾರದ ಮೇಲೆ ಆಂಧ್ರ ಸರ್ಕಾರದ ನಿಲುವನ್ನು ವಿರೋಧ ಮಾಡುತ್ತಾ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರಿ ಕೆ.ಎಸ್.ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು)

+ ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಅತ್ಯಂತ ಗಂಭೀರವಾಗಿತಕ್ಕಂಥ ವಿಚಾರವನ್ನು ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು, ಕಾಂಗ್ರೆಸ್ ಪಕ್ಷದ ನಾಯಕರಾದ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಕನ್ನಡ ಚಳುವಳಿಯ ನಾಯಕರಾದಂಥ ವಾಟಾಳ್‌ರವರು, ನಮ್ಮ ಕಮ್ಯುನಿಸ್ಟ್ ಪಾರ್ಟಿಯ ನಾಯಕರಾದಂಥ ರೆಡ್ಡಿಯವರು, ನಮ್ಮ ರೈತ ಸಂಘದ ಮುಖಂಡರಾದಂಥ ಮಾನ್ಯ ಪುಟ್ಟಣ್ಣಯ್ಯನವರು ಎತ್ತಿದ್ದಾರೆ. ಮೊದಲನೆಯದಾಗಿ ಅವರನ್ನು ಅಭಿನಂದಿಸಬೇಕಾಗುತ್ತದೆ. ಅತ್ಯಂತ ಮಹತ್ವದ ವಿಚಾರವನ್ನು ಈ ಸದನದಲ್ಲಿ ಇಂದಿನ ಸಂದರ್ಭದಲ್ಲಿ ಅಗತ್ಯವಾಗಿ ಚರ್ಚೆ ಆಗಲೇಬೇಕಾದಂಥ ಕಾಲದಲ್ಲಿ ಎತ್ತಿದ್ದಾರೆ. ಅದಕ್ಕಾಗಿ ನಾನು ನಮ್ಮ ಸರ್ಕಾರದ ಪರವಾಗಿ ಅವರನ್ನು ಖಂಡಿತವಾಗಿ ಅಭಿನಂದಿಸುತ್ತೇನೆ. ಅದರಲ್ಲೂ ಸಹ ವಿ.ಪ.ದ ನಾಯಕರು ಮತ್ತು ಮಾನ್ಯ ಖರ್ಗೆಯವರು ಬಹುಪಾಲು ವಿಚಾರಗಳನ್ನು ನಾನೇನು ಹೇಳಬೇಕು ಎಂದಿದ್ದೆನೋ, ಆ ಎಲ್ಲಾ ವಿಚಾರಗಳನ್ನು ಅವರೇ ಹೇಳಿದ್ದಾರೆ. ಹೆಚ್ಚು ವಿಚಾರಗಳಲ್ಲಿ ಡಿಸ್‌ಪ್ಯೂಟ್ ಇರತಕ್ಕಂಥಾದ್ದು ಎಲ್ಲೂ ಇಲ್ಲ. ಅವರೂ ಸಹ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಖರ್ಗೆಯವರು ಯಾವ ಯಾವ ಸಂದರ್ಭದಲ್ಲಿ ಎಷ್ಟು ಎಷ್ಟು ಆಗಿದೆ ಎನ್ನತಕ್ಕಂಥ ವಿಚಾರವನ್ನು ಏನು ಪ್ರಸ್ತಾಪ ಮಾಡಿದ್ದಾರೆ ಅದು ಬಹುಪಾಲು ಸರಿ ಇದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ.

ಈ ಜುರಾಲ ಪ್ರಾಜೆಕ್ಟ್‌ನ್ನು ದಿನಾಂಕ 4.8.1978ನೇ ಇಸವಿಯಲ್ಲಿ ನಮ್ಮ ರಾಜ್ಯಕ್ಕೆ ಮತ್ತು ಆಂಧ್ರಪ್ರದೇಶದವರಿಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಡಿ.ದೇವರಾಜ ಅರಸ್ ಮತ್ತು ಚನ್ನರೆಡ್ಡಿಯವರುಗಳು ಇದ್ದಂತಹ ಕಾಲದಲ್ಲಿ ಇದರ ಬಗ್ಗೆ ಒಪ್ಪಂದವಾಗಿದೆ. 4.8.1978 ಅದರಲ್ಲಿ ಡಿಸ್ಕಷನ್‌ನಲ್ಲಿ ಬಹಳ ಪ್ರಾಮುಖ್ಯವಾದಂತಹ ಅಗ್ರಿಮೆಂಟ್ ನನ್ನ ಬಳಿಯಲ್ಲಿದೆ. ಆ ಅಗ್ರಿಮೆಂಟ್‌ನಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂತಹ ವಿಚಾರಗಳು ಎರಡು ಇವೆ. After the discussion the following points were agreed to:-

"Karnataka, Andhra Pradesh agreed that the AndhraPradesh would go ahead with the proposal Jural

Project with FRL MWL plus 1045 ft above MSL in Krishna basin" 1040 ಫೀಟ್ ಎಂದು ಹೇಳಿದರೆ 318.51 ಎನ್ನತಕ್ಕಂಥದ್ದು ಅಗ್ರಿಯಾಗಿರತಕ್ಕಂತಹ ವಿಚಾರ. ಎರಡನೇ ಪಾಯಿಂಟ್ ಡಿಸ್ಕಷನ್ ಆಗಿರತಕ್ಕಂಥದ್ದು "The Karnataka will take necessary action to acquire any land or structure that may be submerged and or affected under Jural Project and Andhra Pradesh agreed to bear the cost of acquisition, the cost of rehabilitation of displaced families and the cost of construction of bridges, roads, cost of protecting or shifting of temples and other religious places that may be necessary, as decided by the Karnataka."

"As decided by Karnataka" this is very important.

"Such acquisitions and rehabilitation shall be as per the norms prevailing in Karnataka at the time of acquisition and rehabilitation. Karnataka also agrees to the submerge of the river bed and stream beds"

This is the agreement entered in 1978.

The Third point is,

"Karnataka and Andhra Pradesh also agreed that in the event of Andhra Pradesh generating power from this project, the cost or benefit of hydro electricity will be shared equally between the two States. The question of what would constitute thecost of hydro power was not discussed and will be agreed upon separetely"

ಮಾನ್ಯ ಸದಸ್ಯರುಗಳೆಲ್ಲರು ಎಲ್ಲಾ ಪಾಯಿಂಟ್‌ಗಳನ್ನು ಹೇಳಿದ್ದಾರೆ. ಅದಕ್ಕೆ This is the agreement between Karnataka and Andhra Pradesh entered on 4th of August, 1978. ತಮ್ಮ ನಾಲೆಜ್‌ಗೆ ಇರಲಿ ಎಂದು ಹೇಳಿದ್ದಾರೆ. ಇಬ್ಬರು ಮುಖಂಡರುಗಳು ಹೇಳಿರುವುದು ಕರೆಕ್ಟ್ ಆಗಿದೆ. ಎಫ್.ಆರ್.ಎಲ್. ಪ್ರಕಾರವಾಗಿ 318.51 ಮೀಟರ್ ಮೇಲೆ ಎಷ್ಟು ಹೋಗಿದೆ ಎನ್ನತಕ್ಕದ್ದರ ಮೇಲೆ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಮೂರು ಮೀಟರ್ ಎಂದು ಸಂಶಯ ಬಂತು. ಆಮೇಲೆ

ವಿರೋಧ ಪಕ್ಷದವರು ಎಲ್ಲಾರು ಕುಳಿತುಕೊಂಡು ಚರ್ಚೆಯನ್ನು ಮಾಡಿದ ಮೇಲೆ ಜಾಯಿಂಟ್ ಸರ್ವೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿದೆವು ಎನ್ನತಕ್ಕಂತಹ ಮಾತುಗಳನ್ನು ಹೇಳಿದ್ದಾರೆ. ಕರ್ನಾಟಕದ ಮತ್ತು ಆಂಧ್ರಪ್ರದೇಶ ಈ ಎರಡು ರಾಜ್ಯಗಳು ಸೇರಿ ಇದರ ಬಗ್ಗೆ ಜಾಯಿಂಟ್ ಸರ್ವೆಯನ್ನು ಮಾಡಿದ್ದೇವೆ. ಆ ಜಾಯಿಂಟ ಸರ್ವೆಯ ವರದಿಯನ್ನು ಇಲ್ಲಿ ಮೆನ್‌ಷನ್ ಮಾಡುತ್ತೇನೆ.

"Proceedings of the meeting held on 9.12.1995 between the officers of Andhra Pradesh, Karnataka regarding inter State irrigation power"

Just one point I will mention i.e the height of the dam

"As there was apprehension regarding the height of the dam being increased by more than three meters, a joint survey was conducted to ascertain the difference in level. The joint survey have indicated that the difference in crest level is plus 0.62 meters"

ಜಾಯಿಂಟ್ ಸರ್ವೆಯಲ್ಲಿ ಇಂಡಿಕೇಟ್ ಆಗಿರುವುದು ಮೂರು ಮೀಟರ್ ಅಲ್ಲ, .62 ಮೀಟರ್ ಎಂದರೆ 318.61ಮೀಟರ್‌ನಿಂದ ಎಫ್‌ಆರ್‌ಎಲ್ 31.13 ಮೀಟರ್‌ಗೆ ಹೋಗುತ್ತದೆ. 318.51 ಮೀಟರ್‌ಗೆ ನಮಗೆ ಮತ್ತು ಅವರಿಗೆ ಅಗ್ರಿಮೆಂಟ್ ಆಗಿದ್ದದ್ದು 1978ರಲ್ಲಿ. ಜಾಯಿಂಟ್ ಸರ್ವೆಯನ್ನು ಮಾಡಿದ ಮೇಲೆ .62 ಮೀಟರ್ ಜಾಸ್ತಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ಪ್ರಕಾರವೇ ಎರಡು ಫೀಟ್ ಆಯಿತಲ್ಲಾ.

SRI K.N.NAGEGOWDA:- That is true.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಯಾವಾಗ ಇನ್‌ಕ್ರೀಜ್ ಮಾಡುತ್ತಾರೆಂದು ನಾವು ಹೋಗಿ ವಿಜಿಟ್ ಮಾಡಿದಾಗ ರೀ ಸರ್ವೆ ಮಾಡಿದ ಹಾಗೆ ಆಯಿತು. ನಿಮ್ಮ ಡಿಪಾರ್ಟ್‌ಮೆಂಟ್‌ನವರು ಮಾಡಲಿಲ್ಲ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ನಾನು ಅದಕ್ಕೆ ನನ್ನ ಮಾತನ್ನು ಪ್ರಾರಂಭಸಿದಾಗ ಏನು ಹೇಳಿದೆ ಎಂದರೆ ನಮ್ಮ ವಿರೋಧ ಪಕ್ಷದ ನಾಯಕರುಗಳಿಗೆಲ್ಲ ನಾನು ಅಭಿನಂದಿಸುತ್ತೇನೆಂದು. ಒಳ್ಳೆಯ ವಿಚಾರವನ್ನು ಒಳ್ಳೆಯ ಸಂದರ್ಭದಲ್ಲಿ ಎತ್ತಿದ್ದಾರೆ. ವಿರೋಧ ಪಕ್ಷದ ಮುಖಂಡರುಗಳೆಲ್ಲರೂ ಶ್ರೀಮಾನ್ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಮಾತನಾಡಿದ ಮೇಲೆ ಎರಡು ರಾಜ್ಯಗಳಿಂದ ಜಾಯಿಂಟ್ ಸರ್ವೆಯನ್ನು ಮಾಡಿದ ಮೇಲೆ ಮೂರು ಮೀಟರ್ ಎತ್ತರಿಸಿದ್ದಾರೆಂದು ಹೇಳಿರುವುದು ಸರಿಯಾದುದು ಅಲ್ಲ. .62 ಎಂದು ಕರೆಕ್ಟ್

ಫಿಗರ್ ಬಂದ ಮೇಲೆ 318.51 ಯಿಂದ 319.13 ಮೀಟರ್‌ರವರೆಗೆ ಡ್ಯಾಮನ್ನು ಎತ್ತರಿಸಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಅದು ಯಾವ ಮಟ್ಟಕ್ಕೆ?

SRI K.N.NAGEGOWDA:- That is the crest level. Road level is 325 ನನ್ನ ಹತ್ತಿರ ನಕ್ಷೆ ಇದೆ ನೋಡಿ ಹೇಳುತ್ತೇನೆ ಅದನ್ನು ಕನ್‌ಫ್ಯೂಜ್ ಮಾಡಿಕೊಳ್ಳಬೇಡಿ. The bed level is 301.36 crest level is 310.00 canal level is 312.42, the MGD level is 314.86 ನಾವು ಅಗ್ರಿಯಾಗಿದ್ದು ಫುಲ್ ರಿಝರ್ವಾಯರ್ ಲೆವಲ್‌ಗೆ 318.51 ಮೀಟರ್‌ಗೆ ಅದಕ್ಕಿಂತಲೂ ಜಾಸ್ತಿಯಾಗಿ ಹೋಗಬಾರದು ಎಂದು. ಅದರ ಮೇಲೆ ರೋಡ್ ಲೆವಲ್‌ಗೆ 325ರವರೆಗೆ ಹೋಗುತ್ತದೆ. ನೀರನ್ನು ನಿಲ್ಲಿಸುವುದಕ್ಕೆ 1978ರಲ್ಲಿ ಶ್ರೀ ದೇವರಾಜ ಅರಸ್ ಮತ್ತು ಚನ್ನರೆಡ್ಡಿಯವರಿಗೆ ಅಗ್ರಿಮೆಂಟ್ ಆಗಿದ್ದುದು. ಆದಮೇಲೆ 9.12.1995ರಲ್ಲಿ ಸರ್ವೆಯಾದ ಮೇಲೆ ಅದರ ವರದಿಯನ್ನು ಮಾಡಿದಾಗ ರೋಡ್ ಲೆವಲ್ 325ಗೆ ಇರಬೇಕು. arithmetically it will increase by 0.2 FRL level will increase from 318 to 319.13 Road level will also go up 325 to 0.62 ಆದ್ದರಿಂದ ಒಂದು ಹಂತದಲ್ಲಿ ಇದು ಗೊತ್ತಾದ ಮೇಲೆ ಕನ್‌ಟಿನ್ಯೂಸ್ ಆಗಿ ಅಬ್ಜೆಕ್ಷನ್ ಮಾಡಿಕೊಂಡು ಪತ್ರವನ್ನು ಆಂಧ್ರ ಸರ್ಕಾರಕ್ಕೆ ಬರೆದುಕೊಂಡು ಬಂದಿದ್ದಾರೆ. ನಾನು ಇಲ್ಲಿ ಒಂದೇ ಒಂದನ್ನು ಹೇಳುತ್ತೇನೆ. ನಮ್ಮ ಮುಖ್ಯಮಂತ್ರಿಗಳು ಒಂದು ಕಾಗದವನ್ನು ಆಂಧ್ರ ಸರ್ಕಾರಕ್ಕೆ ಬರೆದಿದ್ದಾರೆ. ತಾವುಗಳು ಸರ್ಕಾರದವರು ಏನೂ ಮಾಡಿದ್ದಾರೆ, ಏನು ಆ್ಯಕ್ಷನ್ ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ಮಾನ್ಯ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಬರೆದಂತೆ ಕಾಗದವನ್ನು ಅಲ್ಲಿ ಓದಿ ಹೇಳಿದರೆ, ತಮಗೆ ಗೊತ್ತಾಗಬಹುದು. 8.1.96ರಲ್ಲಿ ಅಂದಿನ, ಮುಖ್ಯಮಂತ್ರಿಗಳಾಗಿದ್ದವರ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡುರವರಿಗೆ ಏನು ಹೇಳುತ್ತಾರೆ ಎಂದರೆ "The impounding of Jurala may be postponed to June, 1997" 1996ರಲ್ಲಿ ನೀವು ಏನನ್ನು ಮಾಡುತ್ತಿದ್ದೀರಿ ಅದನ್ನು ಒಂದು ವರ್ಷಗಳ ಕಾಲ ಮುಂದಕ್ಕೆ ಹಾಕಬೇಕು ಜೂನ್ 1997ಕ್ಕೆ ಮಾಡಬೇಕು. to provide sufficient time to bring the bridges and protective works to a safe stage. Otherwise, any unilateral action on the part of impound water from June, 1996 before completion of the bridges and protective woks may create law and order situation in Karnataka which may even affect the cordial relationship

between the two States...

ವಿರೋಧ ಪಕ್ಷದ ಸದಸ್ಯರುಗಳು ತಾವು ಏನು ಇದರ ಬಗ್ಗೆ ಆ್ಯಕ್ಷನ್ ತೆಗೆದುಕೊಂಡಿದ್ದೀರಿ ಎಂದು ಕೇಳಿದಿರಲ್ಲಾ. ಅದಕ್ಕೆ ಇದೊಂದು ಪದದಿಂದ ಗೊತ್ತಾಗುತ್ತದೆ. ನಾವು ಯಾವ ರೀತಿಯಲ್ಲಿ ಆ್ಯಕ್ಷನ್ ಯಾವ ರೀತಿಯಲ್ಲಿ ತೆಗೆದುಕೊಂಡಿದ್ದೇವೆ ಎಂದರೆ, "it may affect the law and order of the Karnataka" ಮಟ್ಟಿಗೆ ಹೋಗಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖಗೆ:- ಅವರು ಹೇಳಿ ಆಯಿತು. ಆದರೆ ಕನ್‌ಸ್ಟ್ರಕ್ಷನ್ ಆಯಿತು, 25ರಂದು ಉದ್ಘಾಟನೆಯು ಆಯಿತು.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸಹ ಮಂತ್ರಿಯಾಗಿ ಕೆಲಸವನ್ನು ಮಾಡಿದ್ದಾರೆ. ಹಿರಿಯ ಮುಖಂಡರಾಗಿದ್ದೀರಿ, ಯಾವ ಸಂದರ್ಭದಲ್ಲಿ ಆಗಿ ಆಯಿತು, ಏಕೆ ಹೀಗೆ ಆಯಿತು, ಎಲ್ಲಾ ತಮಗೂ ಗೊತ್ತಾಗುತ್ತದೆ. ನಾವುಗಳೆಲ್ಲ ಇಂಜಿನಿಯರಿಂಗ್ ವಿದ್ಯಾರ್ಥಿಗಳಾಗಿದ್ದಾಗ ಕೇರಳದ ಪುಸ್ತಕದಲ್ಲಿ ಆ ಪುಸ್ತಕವನ್ನು ಬರೆದಂತಹ ಕೆ.ಎಲ್.ಆರ್.ರಾವ್ ಇದ್ದರಲ್ಲಾ ಅವರ ಕಾಲದಿಂದಲೂ ಆಗಿ ಬಂದಿದೆ. ತಾವು ಏಕೆ ಈ ರೀತಿಯಾಗಿ ಮಾತನಾಡುತ್ತೀರೋ ಗೊತ್ತಿಲ್ಲ. ನೀವು ಒಂದು ದಿವಸ ಇದರ ಬಗ್ಗೆ ತೆಗೆದುಕೊಂಡು ನೋಡಿ ಆಂಧ್ರದವರು ಏನು ಮಾಡಿಕೊಂಡರು, ನಾವು ಏನು ಮಾಡಿಕೊಂಡಿದ್ದೇವೆ ಎನ್ನುವುದನ್ನೆಲ್ಲ. ನಾಗಾರ್ಜುನ ಸಾಗರವನ್ನು 1962ನೇ ಇಸವಿಯಲ್ಲಿ ನಾನು ಸಿವಿಲ್ ಇಂಜಿನಿಯರ್ ಆಗಿದ್ದಾಗ ನೋಡುವುದಕ್ಕಾಗಿ ಹೋಗಿದ್ದೆ. ಅವತ್ತು ಎಲ್ಲಾ ರಾಷ್ಟ್ರೀಯ ಕೆಲಸಗಳನ್ನು, ರೋಡ್‌ಗಳ ಕೆಲಸವನ್ನು, ಸೈಟ್‌ಗಳ ಕೆಲಸವನ್ನು ಎಲ್ಲವನ್ನೂ ನಿಲ್ಲಿಸಿ. Entire Government amount has been diverted to irrigation.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕ್ಷಮಿಸಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಒಂದು ಆಶ್ವಾಸನೆಯನ್ನು ಇಲ್ಲಿ ಕೊಟ್ಟರು. 4.8.1978ರಲ್ಲಿ ಶ್ರೀಮಾನ್ ದೇವರಾಜ್ ಅರಸ್ ಮತ್ತು ಚೆನ್ನರೆಡ್ಡಿಯವರ ನಡುವೆಯಾದ ಒಪ್ಪಂದದಲ್ಲಿ ಜುರಾಲ ಜಲಾಶಯದ ಗರಿಷ್ಟ ಮಟ್ಟ 1045 ಅಡಿ ಎತ್ತರ ಇತ್ತು. ಇದರ ಒಂದು ಅಂಗುಲ ಸಹ ಎತ್ತರವನ್ನು ಎತ್ತರಿಸಲು ಸರ್ಕಾರ ಒಪ್ಪಿಕೊಳ್ಳುವುದಿಲ್ಲವೆಂದು ಆಗಿನ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಮುಖ್ಯಮಂತ್ರಿ ದೇವೇಗೌಡರು ಹೇಳಿದ್ದರು. ಆದುದರಿಂದ ನಾನು ನಿಮಗೆ ಮೊದಲು ಕೇಳುವುದೇನೆಂದರೆ ಮೊದಲ ಬಾರಿಗೆ ಅಲ್ಲಿಯ ಇಂಜಿನಿಯರ್‌ರೊಬ್ಬರು ನನಗೆ ಸಿಕ್ಕಿಬಿದ್ದು ಜಲಾಶಯದ ಮಟ್ಟ ಎತ್ತರವಾಗಿದೆ ಎನ್ನುವುದನ್ನು ಒಪ್ಪಿಕೊಂಡ ಮೇಲೆ ಪತ್ರಿಕೆಯ ಹೇಳಿಕೆಯನ್ನು ಕೊಟ್ಟೆ. ಸನ್ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷಗಳ ಸದಸ್ಯರುಗಳ ಸಭೆಯನ್ನು ಕರೆದರು. ಆಗ ಇನ್ನು ಆ ಜಲಾಶಯದ ಮಟ್ಟ ಎತ್ತರವಾಗಿರಲಿಲ್ಲ. for your information ನಾನು ಯಾವಾಗ ಒಂದು ವರ್ಷದ ಹಿಂದೆ ಈ ಸದನಕ್ಕೆ ಜುರಾಲ ಅಣೆಕಟ್ಟಿನ ಎತ್ತರದ ಬಗ್ಗೆ

ಗಮನಕ್ಕೆ ತಂದನೋ, ಮತ್ತು ಆಗ ಸ್ಥಳವನ್ನು ಸಹ ನೋಡಿಕೊಂಡು ಬಂದಿದ್ದೆ. ಆಗ ಇನ್ನು ಕೆಲಸ ಮುಗಿದಿರಲಿಲ್ಲ. ಆಗ ಈ ಸರ್ಕಾರ ಪ್ರತಿಪಕ್ಷದ ನಾಯಕ ಜವಾಬ್ದಾರಿಯಿಂದ ಮಾತನಾಡಿದ್ದಾನೆಂದು ಗಮನವನ್ನು ಕೊಟ್ಟಿದ್ದರೆ, ಇವತ್ತು ಆ ಜಲಾಶಯದ ಮಟ್ಟ ಎರಡು ಅಡಿ ಎತ್ತರವಾಗುವುದನ್ನು ತಪ್ಪಿಸಬಹುದಾಗಿತ್ತು. ಎರಡು ಅಡಿ ಎತ್ತರವಾಗಿದೆ ಎಂದರೆ ಎಷ್ಟು ಟಿ.ಎಂ.ಸಿ. ನೀರನ್ನು ಜಾಸ್ತಿ ಸಂಗ್ರಹಿಸಬಹುದು ಸ್ವಾಮಿ. ದಯಮಾಡಿ ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ. ಇದಕ್ಕೆ ಈಗ ಏನು ಮಾಡುವುದಕ್ಕೆ ಆಗುವುದಿಲ್ಲ. ನಮ್ಮಲ್ಲಿ ಮುಳುಗಡೆಯಾಗುವಂಥ ಪ್ರದೇಶಕ್ಕೆ ಹೆಚ್ಚು ಪರಿಹಾರವನ್ನು ತೆಗೆದುಕೊಳ್ಳುವುದರಿಂದ ಅಷ್ಟೇ ಸಮಾಧಾನವಾಗುತ್ತದೆ. ಈಗ ಎರಡು ಅಡಿಗಳ ಜಲಾಶಯದ ಮಟ್ಟ ಜಾಸ್ತಿಯಾಗಿದೆಯಲ್ಲಾ ಇದಕ್ಕೆ ನಮ್ಮ ರಾಜ್ಯದವರು ಏನು ಲಾಭವನ್ನು ಮಾಡಿಕೊಳ್ಳಬೇಕು? ಹೆಚ್ಚು ವಿದ್ಯುತ್‌ನ್ನು ಅವರಿಂದ ತೆಗೆದುಕೊಳ್ಳುತ್ತೀರೇ? ಇಲ್ಲ ನಮ್ಮ ಕಡೆಯಿಂದ ಹಾಕುವ ಹಣದ ಷೇರ್‌ನಲ್ಲಿ ಕಡಿಮೆ ಮಾಡಿಕೊಳ್ಳುತ್ತೀರೆ ವಿದ್ಯುತ್ ಉತ್ಪಾದನೆ ಮಾಡುತ್ತಾರಲ್ಲಾ ಅದಕ್ಕೆ ಏನಾದರೂ ಕಾಂಪೆನ್‌ಸೇಟ್ ಮಾಡಿಕೊಡುವುದಕ್ಕೆ ಹೇಳುತ್ತೀರೋ? ಎರಡು ಅಡಿ ಎತ್ತರವಾಗಿರುವುದರಿಂದ ಎಷ್ಟು ಹೆಚ್ಚು ಟಿ.ಎಂ.ಸಿ. ನೀರನ್ನು ಹೆಚ್ಚು ಸಂಗ್ರಹಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರು ಹೇಳಿಕೆಯನ್ನು ಕೊಟ್ಟಿರುವುದರಿಂದ ಮತ್ತು ಅವರು ಈ ಸದನದಲ್ಲಿ ಈಗ ಇರುವುದರಿಂದ ಆಂಧ್ರದ ಯೋಜನೆಯು ಈಗಾಗಲೇ ಪ್ರಾರಂಭವಾಗಿದೆ. 270 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಈ ಯೋಜನೆಗೆ ಕೇಂದ್ರ ವಿದ್ಯುತ್ ಉತ್ಪಾದಕ ಈಗಾಗಲೇ ಅನುಮತಿಯನ್ನು ನೀಡಲಾಗಿದೆ. ಕರ್ನಾಟಕ ರಾಜ್ಯವು ಯೋಜನೆಯ ಅರ್ಧ ಪಾಲು ವಿದ್ಯುತ್ ಪಡೆಯುವುದು ಎಂಬ ವಿಚಾರ ಪ್ರಸ್ತಾಪಕ್ಕೆ ಬಂದು ಹಣ ಕೊಟ್ಟು ವಿದ್ಯುತ್ ಪಡೆಯಲು ನಮ್ಮ ಅಭ್ಯಂತರವಿಲ್ಲ ಎಂದು ಮುಖ್ಯಮಂತ್ರಿಯಾಗುವುದಕ್ಕೆ ಮುಂಚೆ ಫೆಬ್ರವರಿ 13ನೇ ತಾರೀಖಿನಂದು ಹೇಳಿದಾಗ ಆಂಧ್ರದ ಮುಖ್ಯ ಮಂತ್ರಿ ಶ್ರೀ ಎನ್.ಟಿ.ಆರ್. ಅವರನ್ನು ಇತ್ತೀಚೆಗೆ ಭೇಟಿ ಆಗಿದ್ದಾಗ ಮಾತನಾಡತಕ್ಕ ಸಂದರ್ಭದಲ್ಲಿ ಯಾವ ಕಾರಣಕ್ಕೂ ಸಹ ಒಂದು ಇಂಚೂ ಜುರಾಲ ಯೋಜನೆ ಎತ್ತರವಾಗುವುದಕ್ಕೆ ಬಿಡುವುದಿಲ್ಲ ಬೇಕಾದ್ದು ಆಗಲಿ ನಾನು ಎದುರಿಸುತ್ತೇನೆಂದು ತಾವು ಹೇಳಿದ್ದಿರಿ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಮಂತ್ರಿಗಳು ವಿವರಗಳನ್ನು ಕೊಟ್ಟಿದ್ದಾರೆ. ಹಿಂದೆ ಶ್ರೀ ಎನ್.ಟಿ.ಆರ್. ಅವರನ್ನು ನಾನು ನೋಡಿದಾಗ ಅನಂತರ ಶ್ರೀ ಚಂದ್ರಬಾಬು ನಾಯ್ಡು ಅವರು ಮುಖ್ಯಮಂತ್ರಿ ಆದಮೇಲೆ, ನಾನು ಮತ್ತು ಶ್ರೀ ದೇವೇಗೌಡರು ಮಾತನಾಡಿದಾಗ ಈ ಎರಡೂ ಸಮಸ್ಯೆಗಳನ್ನು ಚರ್ಚೆ ಮಾಡಿದ್ದೇವೆ. ಅಂದರೆ ಇನ್ನೂ ಶ್ರೀ ದೇವೇಗೌಡರು ನಮ್ಮ ಮುಖ್ಯಮುಂತ್ರಿಗಳಾಗಿದ್ದಾಗ, ಆಗಿದ್ದ ರಾಜಕೀಯ ಪರಿಸ್ಥಿತಿನೇ ಬೇರೆ, ಈಗಿರತಕ್ಕ ಪರಿಸ್ಥಿತಿಯೇ ಬೇರೆ. ತಾವು ಸಹಮತಿ ಕೊಡುತ್ತೀರೆಂದು ನಾನು ಹೇಳುವುದಿಲ್ಲ. ಆಂಧ್ರ ವಿಧಾನಸಭೆಯಲ್ಲಿ ಏನು ಚರ್ಚೆಯಾಗಿದೆ, ತಮಿಳ್ನಾಡು ವಿಧಾನ ಸಭೆಯಲ್ಲಿ ಯಾವ ಯಾವ ವಿಷಯದ ಬಗ್ಗೆ ಚರ್ಚೆಯಾಗಿದೆ ಎಂದು ನಾನು

ನೋಡಿದ್ದೇನೆ, ಬಹಳ ಕೇರ್‌ಫುಲ್ ಆಗಿ ಸ್ಟಡಿ ಮಾಡಿದ್ದೇನೆ. ಶ್ರೀ ಚಂದ್ರಬಾಬು ಅವರಾಗಲಿ ಅಥವಾ ಶ್ರೀ ಕರುಣಾನಿಧಿಯವರಾಗಲಿ ಇವತ್ತು ನಮ್ಮ ಅಂತರರಾಜ್ಯ ಸಂಬಂಧವನ್ನು ಉತ್ತಮವಾಗಿ ಮಾಡುವುದಕ್ಕೆ ಅವರು ತಯಾರಿದ್ದಾರೆ, ಇವರು ತಯಾರಿದ್ದಾರೆ. ಜುರಾಲದ್ದು ಏನು ನಾವು 2 ಇಂಚು 2 ಅಡಿ ಹೆಚ್ಚು ಮಾಡಿಕೊಂಡು ಜಾಸ್ತಿ ಪವರ್ ಜನರೇಟ್ ಮಾಡಿದರೆ ಅಥವಾ ಎಲ್ಲಿ ಗದ್ದೆ ಮುಳುಗಡೆಯಾಗಿರುತ್ತದೆ ಅದಕ್ಕೆ ಕಾಂಪನ್‌ಸೇಷನ್ ಕೊಡಬೇಕು, ಬ್ರಿಡ್ಜಸ್ ಅವರೇ ಕಟ್ಟಿಸಿಕೊಡಬೇಕು ಇವೆಲ್ಲ ಕೆಲವು ವಿವರಗಳನ್ನು ಮಾತನಾಡಿದ್ದರು. ಅಪ್-ಟು-ಡೇಟ್ ಪೊಸಿಷನ್ ಏನೆಂದು ನನಗೆ ಗೊತ್ತಿಲ್ಲ, ಇದರ ಮೇಲೆ ಆಲಮಟ್ಟಿಯದು ಹೀಗೆಯೇ ಒಂದು ಕನೆಕ್ಟಡ್ ಪ್ರಾಬ್ಲಂ ಇದೆ ಆಲಮಟ್ಟಿ ಬಗ್ಗೆ ಇವತ್ತು ಆ ಸದನದಲ್ಲಿ ಹೇಳಿದೆವು. ಈಗ 506 ಅಡಿ ಎತ್ತರಕ್ಕೆ ಬಂದಿದ್ದೇವೆ, 509 ಅಡಿಗೆ ನಾವು ಎತ್ತರಿಸಿದರೆ ಸುಮಾರು 90 ಹಳ್ಳಿಗಳು ಮುಳುಗಡೆಯಾಗುತ್ತವೆ. 519ರವರೆಗೆ ನಾವು ನಮ್ಮ ಶೇರ್ ಏನಿದೆ ನೀರು ತೆಗೆದುಕೊಳ್ಳುವುದಕ್ಕೆ ಆ ಪ್ರಕಾರ 519ಕ್ಕೆ ಹೋದರೆ ನಮಗೆ ನೀರು ಆಗುತ್ತದೆ ಆದರೆ 24ಕ್ಕೆ ನಾವು crest gates ಹಾಕಿ ಎತ್ತರ ಮಾಡಿದರೆ ಹೆಚ್ಚು ಎಲೆಕ್ಟ್ರಿಸಿಟಿ ಜನರೇಟ್ ಆಗುತ್ತದೆ. ಆಕಾರಣದಿಂದ ಅವರು ಒಪ್ಪಿಗೆ ಕೊಟ್ಟರೆ ನಮಗೆ ಎಲೆಕ್ಟ್ರಿಸಿಟಿ ಮತ್ತು ಇರಿಗೇಷನ್‌ಗೆ ನೀರು ಬೇಕು ಇವೆರಡು ಬಹಳ ಪ್ರಾಮುಖ್ಯವಾದವು. ಇದಕ್ಕೆ ನಾವು ಅವರಲ್ಲಿ ಪ್ರತಿ ಪಾಯಿಂಟ್‌ಟು ಪಾಯಿಂಟ್ ಅಬ್‌ಸ್ಟ್ರಕಲ್ಸ್ ಕಾಣುವುದಾಗಲಿ, ಅವರು ನಮಗೆ ಏನು ಮಾಡಕೂಡದು ಎಂದು ಹೇಳುವುದಾಗಲಿ ಬೇಡ ಎಂಬ ವಾತಾವರಣ ಇರುವುದರಿಂದ ಈ ಸದನಕ್ಕೆ ಸದನಕ್ಕಿಂತ ದೊಡ್ಡದಲ್ಲ ಸರ್ಕಾರ, ಈ ಸದನಕ್ಕೆ ಇಷ್ಟೇ ಮನವರಿಕೆ ಮಾಡಿಕೊಳ್ಳುವುದು, ಈಗ ಇಂಥ ವಾತಾವರಣ ಉಪಯೋಗ ಮಾಡಿಕೊಳ್ಳತಕ್ಕ ತೀರ್ಮಾನಕ್ಕೆ ನಾವೆಲ್ಲರೂ ಸೇರೋಣ. Against the interest of the State ಎಂದು ಅಲ್ಲ. ಕೆಲವು ಕಡೆ give and take ಎಂಬ ಪರಿಸ್ಥಿತಿ ಬರಬಹುದು. ಅದಕ್ಕೋಸ್ಕರವಾಗಿ ವಿವರಗಳನ್ನು ಅಥವಾ ಯಾವ ಯಾವ ಪ್ರಾಜೆಕ್ಟ್‌ಗಳ ಬಗ್ಗೆ ಏನೇನು ಮಾತುಕತೆ ಆಡಿದ್ದಾರೆ ಎಂಬುದರ ಬಗ್ಗೆ ತಮ್ಮಗಳನ್ನೆಲ್ಲಾ ವಿರೋಧ ಪಕ್ಷದ ನಾಯಕರನ್ನು ಕರೆದು After I take them into my confidence ನಾವು ಏನಾದರೂ ಅನೌನ್ಸ್ ಮಾಡುವುದು ಒಳ್ಳೆಯದು. ಈಗಲೇ ಬೇಡ, ತೋಳು ಮುದುರುವುದು ಅದೆಲ್ಲ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ, ನಾವು ಹಿಂದೆ ಆದಂಥ ಒಪ್ಪಂದದಂತೆ ನಡೆದುಕೊಳ್ಳಬೇಕಾಗಿತ್ತು. ಒಂದು ವರ್ಷದಿಂದ ನನ್ನ ಗಮನಕ್ಕೆ ಏನು ಬಂತು ಆ ಒಪ್ಪಂದದ ಪ್ರಕಾರ ನಾವು 3 ಮೀಟರ್ ಅಂದೆವು, ಈಗ ಎರಡು ಅಡಿ ಎಂದು ಒಪ್ಪಿಕೊಳ್ಳುತ್ತಿದ್ದೇವೆ. ಇದಕ್ಕೆ ನಿನ್ನೆ ದಿವಸ ತಮಗೆ ಗೊತ್ತಿದೆ, ಆಂಧ್ರಪ್ರದೇಶ ಅಸೆಂಬ್ಲಿಯಲ್ಲಿ ವಿಶೇಷ ಅಧಿವೇಶನ ಕರೆದು ಆಲಮಟ್ಟಿ ಅಣೆಕಟ್ಟು ಎತ್ತರವಾಗಿರುವುದರ ಬಗ್ಗೆ ಪ್ರಧಾನಮಂತ್ರಿಗಳು ಮಧ್ಯೆ ಪ್ರವೇಶ ಮಾಡಬೇಕೆಂದು ಯುನಾನಿಮಸ್ ರೆಸಲ್ಯೂಷನ್ ಪಾಸ್ ಮಾಡಿದ್ದಾರೆ. ನಾನು ಹೇಳುತ್ತೇನೆ, ಇವತ್ತು ಆಲಮಟ್ಟಿಯಲ್ಲಿ

ತಮಗೆ ಗೊತ್ತಿದೆ, ಏನು ಅಪ್ರೂವಲ್ ಕೊಟ್ಟಿದ್ದಾರೆ ಅಷ್ಟು ಮಾತ್ರ ನಾವು ಮಾಡುತ್ತಿದ್ದೇವೆ ಅಂದರೆ ಯಾರು ಇದನ್ನು ಕೇಳುತ್ತಿರುವವರು? ಯಾರು ಈ ಗೊಂದಲ ನಿರ್ಮಾಣ ಮಾಡುತ್ತಿರುವವರು? ನಾವಂತೂ ಮಾಡಲಿಲ್ಲ. ಕರ್ನಾಟಕದಲ್ಲಿ ಹಿಂದೆ ಏನು ಒಪ್ಪಂದ ಆಯಿತು ಅದರಂತೆ ಮುಂದುವರಿದುಕೊಂಡು ಹೋಗಬೇಕು, ಸೌಹಾರ್ದಯುತ ವಾತಾವರಣ ಎರಡು ರಾಜ್ಯಕ್ಕೆ ಇರಬೇಕೆಂಬ ಕಳಕಳಿ ಇರುವವರು ನಾವು. ಗೊಂದಲ ಮಾಡುತ್ತಿರುವವರು ಅವರು.

ಶ್ರೀ ಕೆ.ಎನ್.ನಾಗೇಗೌಡ:- ಅದಕ್ಕೆ ಒಂದು ಸಲಹೆಯನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಎರಡು ಪತ್ರಗಳಲ್ಲಿ ನಮ್ಮ ಮುಖ್ಯಮಂತ್ರಿಗಳು ಮತ್ತು ಅವರ ಮುಖ್ಯಮಂತ್ರಿಗಳು ಜನವರಿ ಕರೆಸ್ಪಾಂಡೆನ್ಸ್ ಮಾಡಿರುವುದನ್ನೂ ಹೇಳಿದರೆ ತಮಗೆ ಅರ್ಥವಾಗುತ್ತದೆಂದು ಕಾಣುತ್ತದೆ, "I have no objection towards further talk if you deem it necessary at a mutual convenient place and time to arrive at an understanding based on a mutual cooperation in the interest of maintaining good neighbour relations." ಎಂದು ಇವರು ಬರೆದಿದ್ದಾರೆ. ಅದಕ್ಕೆ ಪುನಃ 10-3-96ರಲ್ಲಿ ಶ್ರೀ ಚಂದ್ರಬಾಬು ನಾಯ್ಡು ಸಹ ಬರೆಯುತ್ತಾರೆ. ನೀವು ಆ ಹಳ್ಳಿಗಳನ್ನು ಕಂಪ್ಲೀಟ್ ಷಿಫ್ಟ್ ಮಾಡಿದರೆ ನನಗೆ ಬಹಳ ಪ್ರಯೋಜನವಾಗುತ್ತದೆ, ಆ ಪ್ರೋಪೋಸಲ್ ಒಪ್ಪಿಕೊಳ್ಳುವುದಕ್ಕೆ ಆಗುತ್ತದೆ, ಇಲ್ಲ ಮಾತುಕತೆ ಆಡಬೇಕೆಂದರೆ I request that the above suggestion may be got examined and appropriate action may be taken in this matter. I am hereby enclosing a note.... ಎಂದು ಬರೆದುಕೊಂಡು ಅವರೂ ಸಹ ಅದೇ ಪಾಯಿಂಟ್ ಹೇಳಿದ್ದಾರೆ. ಇಷ್ಟಕ್ಕೇ ನಿಲ್ಲಿಸಿದಾಗ ಒಂದು ಸ್ಪೆಸಿಫಿಕ್ ಪಾಯಿಂಟ್ ಇಬ್ಬರು ನಾಯಕರು ಹೇಳಿದ ರೀತಿಯಲ್ಲಿ 0.62 ಮೀಟರ್ ಇನ್‌ಕ್ರೀಸ್ ಮಾಡಿದ ಮೇಲೆ They have violated the Bachawat Award by increasing 1 to 1.25 TMC. ಅದಕ್ಕೆ ಮಾನ್ಯ ನಂಜೇಗೌಡರು ಸಲಹೆ ಕೊಟ್ಟು ಹೊರಗಡೆ ಹೊರಟು ಹೋದರು, Just I am bringing it to the notice of the House and the Hon'ble Chief Minister and the Leader of the Opposition ಇದು ಏನು ಜಾಸ್ತಿ ಮಾಡಿಕೊಂಡಿದ್ದಾರೆ ಇದು ಬಚಾವತ್ ಅವಾರ್ಡಿಗೆ ವಿರುದ್ಧ ಎಂಬುದು ನಮ್ಮ ಕಂಟೆನ್‌ಷನ್ ಇದೆ. ಅವರು ಹೇಳಿದ ಹಾಗೆ 11 ಟಿಎಂಸಿ.ಯಿಂದ 17 ಟಿಎಂಸಿ.ಗೆ ಹೋಗಿದೆಯಲ್ಲ ಅಂದರೆ ಸ್ಟೋರೇಜ್ 11 ಟಿಎಂಸಿ, ಯುಟಿಲಿಟಿ 17 ಟಿಎಂಸಿ. ಸ್ಟೋರೇಜ್ ಆದ 2/3 ಯುಟಿಲಿಟಿ ಆಗುತ್ತದೆ. ಯುಟಿಲೈಸ್ ಮಾಡಿಕೊಳ್ಳುವುದು 17 ಟಿಎಂಸಿ. ಅದರಲ್ಲಿ ಏನು ಒಂದು ಟಿಎಂಸಿ ಹೆಚ್ಚಿಗೆ ಆಗುತ್ತದೆ ಅದರ ಬಗ್ಗೆ We have to write to the Government of India and equally we must

write to the Government of Andhra Pradesh to suggest an alternative thing. This is number one. ಎರಡನೆಯದು, ರೀಹ್ಯಾಬಿಲಿಟೇಷನ್ ಸ್ಕೀಂನಲ್ಲಿ ನಮ್ಮವರು ಅವರು ಎಲ್ಲ ಹೋಗಿ ಬಂದಮೇಲೆ 21 ಕೋಟಿ ರೂಪಾಯಿ ಪ್ರೊಪೋಸಲ್ ಲೋಕೋಪಯೋಗಿ ಇಲಾಖೆಯವರು ಎಸ್ಟಿಮೇಟ್ ಮಾಡಿ ಡಬಲ್ ಲೈನ್ ಬ್ರಿಡ್ಜಸ್ ಪ್ರೊಪೋಸ್ ಮಾಡಿ 4 ಬ್ರಿಡ್ಜಸ್ including approach, protecting wall to both the temples, ನಾರದಗುಡ್ಡ, ದತ್ತಾತ್ರೇಯ ಪೀಠ ಏನಿದೆ ಅವು ಎರಡಕ್ಕೆ ಐಲ್ಯಾಂಡ್ ಪ್ರೊಟೆಕ್ಷನ್ ತರಹ ವಾಲ್ ಇದೆ. ನಾನು ಮ್ಯಾಪ್ ನೋಡಿದೆ, ಇನ್ನೂ ಜಾಗ ನೋಡಿಲ್ಲ. ಮ್ಯಾಪ್ ನೋಡಿದರೆ ಐಲ್ಯಾಂಡಿಗೆ ಒಂದೊಂದು ಊರಿಗೆ ಲಿಂಕ್ ಮಾಡುವುದಕ್ಕೆ ಸಜೆಸ್ಟ್ ಮಾಡಿದ್ದಾರೆ ಮತ್ತು ದೇವಸ್ಥಾನವನ್ನೂ ಪ್ರೊಟೆಕ್ಟ್ ಮಾಡುವುದಕ್ಕೆ ಪ್ರೊಟೆಕ್ಷನ್ ವಾಲ್ ಕೊಡಬೇಕೆಂದು ಹೇಳಿದ್ದಾರೆ. ನಾನು ಇವತ್ತು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಹತ್ತಿರ ಕೂಡ ಮಾತನಾಡಿದೆ. ನಮ್ಮ ಶ್ರೀ ಜೆ.ಹೆಚ್.ಪಟೇಲರು ಮುಖ್ಯ ಮಂತ್ರಿಗಳಾದ ಮೇಲೆ ಅವರೂ ಕೂಡ ಒಂದು ಪತ್ರ ಬರೆದಿದ್ದಾರೆ. ಜೂನ್ 21ರಲ್ಲಿ ಕಾಗದ ಬರೆಯುತ್ತಾ ಕೊನೆಯ ಪಕ್ಷ 12 ಕೋಟಿ ರೂಪಾಯಿ ಮೊದಲ ಕಂತನ್ನು ಕೊಡಲೇಬೇಕೆಂದು ಹೇಳಿದ್ದಾರೆ. ನಾವು ಎಲ್ಲಿಯೂ ಸಹ I really thank you because after the All Party meeting all actions have been taken. ನಾನು ಹಿಂದಕ್ಕೆ ಹೋಗುವುದಕ್ಕೆ ಹೋಗುವುದಿಲ್ಲ. ಆಲ್ ಪಾರ್ಟಿ ಮೀಟಿಂಗ್ ಕರೆದ ಮೇಲೆ ಸರ್ವೆ ಆಗಿದೆ, ಐಡೆಂಟಿಫೈ ಆಗಿದೆ, ಯಾವ ಯಾವ ಹಳ್ಳಿಗಳು ಎಂದು ಐಡಂಟಿಫೈ ಆಗಿದೆ. ಆ ಬ್ರಿಡ್ಜಸ್‌ಗೆ 21 ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ.

ಶ್ರೀ ಬಿ.ಎಸ್.ಎಡಿಯೂರಪ್ಪ:- ನಾವು ಇದನ್ನು ಪ್ರಸ್ತಾಪ ಮಾಡಿ ಒಂದೂವರೆ ವರ್ಷವಾಯಿತು. ತಕ್ಷಣ ಕೆಲಸ ಪ್ರಾರಂಭ ಮಾಡುತ್ತೇವೆ, ಬ್ರಿಡ್ಜ್ ಕಟ್ಟುವುದಕ್ಕೆ ಅಡ್ಡ. ಗೋಡೆ ಕಟ್ಟುವುದಕ್ಕೆ ಪ್ರಾರಂಭ ಮಾಡುತ್ತೇವೆ ಎಂದು ಹೇಳಿ ಇದುವರೆಗೆ ಕೆಲಸ ಪ್ರಾರಂಭ ಮಾಡಿಲ್ಲ.

ಶ್ರೀ ಕೆ.ಎನ್.ನಾಗೇಗೌಡ:- ಅದಕ್ಕೆ ಹಿಂದಿನ ಮುಖ್ಯ ಮಂತ್ರಿಗಳು ಜೂನ್ 1997ರಲ್ಲಿ ಪ್ರಾರಂಭ ಮಾಡಿ ಎಂದು ಕಾಗದ ಬರೆದಿದ್ದಾರೆ. ಆ ಪ್ಯಾರಾ ಓದುತ್ತೇನೆ. ಈ ರಾಜ್ಯದಲ್ಲಿ ವಾತಾವರಣ ಕೆಟ್ಟಿದೆ ಎಂಬ ಮಟ್ಟಕ್ಕೆ ಕಾಗದ ಬರೆದಿದ್ದಾರೆ. ಅದು ಒಂದು ಅಂಶ ಹೇಳುತ್ತಾ, ಇನ್ನೊಂದು ಪ್ರಮುಖವಾದುದೆಂದರೆ ಅವರು ದುಡ್ಡು ಕೊಟ್ಟಿರುವುದು ಯಾವುದಕ್ಕೆ ಎಂದರೆ 534 ಹಳ್ಳಿಗಳು ಎಂದು ನಾವೇನು ಐಡೆಂಟಿಫೈ ಮಾಡಿದ್ದೇವೆ 559 ಎಂದು ರಾಂಗ್ ಬೆಂಚ್ ಮಾರ್ಕ್ ತೆಗೆದುಕೊಂಡು ಸರ್ವೆ ಮಾಡಿದರು. ಬೆಂಚ್ ಮಾರ್ಕ್ ಎಂದರೆ ಜಿ.ಟಿ.ಎಸ್. ಎಂದು ಬೆಂಚ್ ಮಾರ್ಕ್ ಇದೆ. ಆ ಬೆಂಚ್ ಮಾರ್ಕ್‌ನಲ್ಲಿ ರಾಯಚೂರಿನಿಂದ 70 ಕಿಲೋಮೀಟರ್ ಬೆಂಚ್‌ಮಾರ್ಕ್ ತೆಗೆದುಕೊಂಡು ಸರ್ವೆ ಮಾಡಿ 559 ಹಳ್ಳಿಗಳು ಎಂದು ಮಾಡಿದ್ದಾರೆ. ಪುನಃ ಜುರಾಲದಿಂದ ಗೂಡವಾಲ

ಐ.ಬಿ.ಗೆ ಅಲ್ಲಿ ಡ್ಯಾಂ ಸೈಟ್ ಎಂದು ಹತ್ತು ಕಿಲೋಮೀಟರ್‌ಗೆ ಬೆಂಚ್ ಮಾರ್ಕ್ ತೆಗೆದುಕೊಂಡು ಸರ್ವೆ ಮಾಡಿದಾಗ 534 ಹಳ್ಳಿಗಳು ಎಂದು ಬಂದಿದೆ. ಖರ್ಗೆಯವರು ಹೇಳಿದರು ಎರಡು ಸಾವಿರ ಹಳ್ಳಿಗಳು ಎಂದು. ನಮ್ಮ ಕಾರ್ಯದರ್ಶಿಯವರು ಹೋಗಿದ್ದಾರೆ. ಯಾರೂ ಸಹ ಶಾಮೀಲಾಗಿಲ್ಲ. ಅಲ್ಲಿ ಹೋಗಿಕೆಲಸ ಮಾಡಿರತಕ್ಕ ಇಂಜಿನಿಯರ್ ಇನ್ ಚೀಫ್, ಈಗಾಗಲೇ ಅಲ್ಲಿ ಹೋಗಿ ಕೆಲಸ ಮಾಡಿರತಕ್ಕ ಕಾರ್ಯದರ್ಶಿಯವರಾಗಲಿ ಒಳ್ಳೆಯ ರೀತಿಯಲ್ಲಿ ಆರ್ಗ್ಯುಮೆಂಟ್ ಮಾಡಿರತಕ್ಕ ಎಲ್ಲ ಪ್ರೊಸೀಡಿಂಗ್ಸ್ ನನ್ನ ಹತ್ತಿರ ಇದೆ. ಮುಖ್ಯ ಕಾರ್ಯದರ್ಶಿಯವರ ಮಟ್ಟದಲ್ಲಿ ಮೀಟಿಂಗ್ ಆಗಿದೆ. ಇಂಜಿನಿಯರ್‌ಗಳ ಮಟ್ಟದಲ್ಲಿ ಮೀಟಿಂಗ್ ಆಗಿದೆ. ಕೇಂದ್ರ ಸರ್ಕಾರಕ್ಕೆ ಬರೆಯಬೇಕೆಂದಾಗ ನಮ್ಮ ಸರ್ಕಾರ ಒಪ್ಪಿಕೊಂಡಿಲ್ಲ. ಯಾವ ಯಾವ ಹಳ್ಳಿಗಳು ಎಂದು ಐಡೆಂಟಿಫೈ ಮಾಡಿದ್ದೇವೆ. ಲ್ಯಾಂಡ್ ಅಕ್ವಿಷಿಷನ್‌ಗೆ ಎಂದು ಐಡೆಂಟಿಫೈ ಮಾಡಿ ಒಂದು ಕೋಟಿ 76 ಲಕ್ಷದಲ್ಲಿ ಒಂದು ಕೋಟಿ 46 ಲಕ್ಷ ರೂಪಾಯಿಗಳನ್ನು ಪೇಮೆಂಟ್ ಮಾಡಿದ್ದೇವೆ. ಬ್ಯಾಲೆನ್ಸ್ ಅಮೌಂಟ್ 20 ಲಕ್ಷ ಷಾರ್ಟೇಜ್ ಇದೆ ಎಂದು ಕರೆಸ್ಪಾಂಡೆನ್ಸ್ ಮಾಡುತ್ತಿದ್ದೇವೆ. 90 ಹಳ್ಳಿಗಳನ್ನು ಸಹ ಐಡೆಂಟಿಫೈ ಮಾಡಿದ್ದೇವೆ. ಅದರಲ್ಲಿ ಅಗ್ರಹಾರ, ಕುರುವರಕುಲ 275 ಎಕರೆ, ಕೀರ್ತಿಬಲೆ 3 ಎಕರೆ 5 ಗುಂಟೆ, ಗುರುವಪುರ 71 ಎಕರೆ, ಗುರುಡಿಪಾಳು 64 ಎಕರೆ 27 ಗುಂಟೆ ಹೀಗೆ ಒಟ್ಟು 534 ಎಕರೆ ಎಂದು ಮಾಡಿದ್ದೇವೆ. ಎರಡು ಸಾವಿರ ಎಕರೆ ಎಂದು ಯಾವ ಆಧಾರದ ಮೇಲೆ ಹೇಳಿದಿರಿ ಎಂದು ಗೊತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆಧಾರದ ಮೇಲೆಯೇ ಹೇಳಿದ್ದು, ತಾವೇ ಒಪ್ಪಿಕೊಂಡಿದ್ದೀರಿ. ತಮ್ಮ ರಿಪೋರ್ಟ್ ಪ್ರಕಾರ ಇವತ್ತು ಅವರು 3 ಅಡಿ ಎತ್ತರ ಮಾಡಿದ್ದಾರೆಂದು ಹೇಳಿದಿರಿ.

2.40 ಪಿ.ಎಂ.

ಇದು ನಮ್ಮ ಅಲಿಗೇಷನ್ನೂ ಇತ್ತು. ಜಾಯಿಂಟ್ ಸರ್ವೆ ರಿಪೋರ್ಟ್ ಬಂದಮೇಲೆ ಇವತ್ತು 3 ಫೀಟ್ ಎಂದು ಹೇಳಿದ್ದೀರಿ. ನಾವು 6 ಫೀಟ್ ಎಂದು ಹೇಳಿರಬಹುದು. ನೀವು 3 ಫೀಟ್‌ಗಾದರೂ ಒಪ್ಪಿಕೊಂಡಿದ್ದೀರಿ. 3 ಫೀಟ್ ಎತ್ತರ ಆದಮೇಲೆ automatically submerge area will be large. ಇದಾದರೂ ಒಪ್ಪಿಕೊಳ್ಳುತ್ತೀರೋ? 318 ಮೀಟರ್‌ಗೆ ನೀವು ಒಪ್ಪಿಕೊಂಡು ಅಲ್ಲಿ ಲ್ಯಾಂಡ್ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಏನು ಮಾಡಿದ್ದರು ನ್ಯಾಚುರಲಿ ಅದು 559 ಎಕರೆ. Now according to the villagers and automatically with this 3 ft they have unilaterally an area of submersion will be 2,477 acres.... ಅದು ಯಾವಯಾವ ಊರಿನಲ್ಲಿ ಅಂದರೆ ಮರ್ಗಿಗಡ್ಡ 225 ಎಕರೆ, ಕುರ್ವಾಕುರುಡಾ 1145 ಎಕರೆ, ಅಗ್ರಹಾರ ಮತ್ತು ಕುರುವರಕುಲ್ಲ ಇದು 985 ಎಕರೆ, ನಾರದಗುಡ್ಡದಲ್ಲಿ 120 ಎಕರೆ.

ಶ್ರೀ ಜೆ.ಎಚ್.ಪಟೇಲ್:- ಎರಡು ಸಾವಿರ ಎಕರೆ ಮುಳುಗಡೆಯಾಗಿದ್ದರೆ ನಾವು

ಅದನ್ನು ಐನೂರು ಅಂತ ಹೇಳಿದರೆ ತಪ್ಪಾಗುತ್ತದೆ. ಅಥವಾ 500 ಎಕರೆ ಮುಳುಗಡೆಯಾದಾಗ 2 ಸಾವಿರ ಎಕರೆ ಎಂದು ಹೇಳಿದರೂ ತಪ್ಪಾಗುತ್ತದೆ. ತಪ್ಪಿದ್ದರೆ ವೆರಿಫೈ ಮಾಡಿಸೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀರು ನಿಂತರೆ ಇವೆಲ್ಲವೂ ಕೂಡ ಮುಳುಗಿಹೋಗುತ್ತವೆ. Unless you pay land compensation to them, those villagers they are going to affect automatically the bridge which was not included in your earlier project. Now unilaterally they have increased 3 feet....... ನಿಮ್ಮ ಗಮನಕ್ಕೆ ಬಂದಿದ್ದು ಯಾವಾಗ? ಆಗಸ್ಟ್‌ನಲ್ಲಿ. ನೀವು ಜಾಯಿಂಟ್ ಸರ್ವೆಗೆ ಕಳುಹಿಸಿದ್ದು ಯಾವಾಗ? ಆಗಸ್ಟ್ ತಿಂಗಳಲ್ಲಿ. ಅದರ ಪ್ರೊಸೀಡಿಂಗ್ಸ್ ಬಂದಿದ್ದೂ ಆಗಸ್ಟ್‌ನಲ್ಲಿ.

ಶ್ರೀ ಜೆ.ಎಚ್.ಪಟೇಲ್:- ಮುಳುಗಡೆಯಾಗುವ ಜಮೀನಿಗೆ ಪರಿಹಾರ ಎಷ್ಟು ಕೊಡಿಸಬೇಕು ಎನ್ನುವುದರ ಬಗ್ಗೆ ವೆರಿಫೈ ಮಾಡೋಣ. ಫ್ಯಾಕ್ಟ್ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅದಕ್ಕೋಸ್ಕರವೇ ನಾವು ರೀಸರ್ವೆಗೆ ಡಿಮ್ಯಾಂಡ್ ಮಾಡುತ್ತಿರುವುದು. ರೀಸರ್ವೆ ಮಾಡಿಯೇ ದುಡ್ಡು ಕೇಳಬೇಕಲ್ಲ ಅವರಿಂದ.

SRI K.N.NAGEGOWDA:- It is a technical point. Don't press it for resurvey. Andhra Pradesh is pressing Central Government survey, let the Government of India make a survey. ಎಂದು ಅವರು ಹೇಳಿದ್ದಾರೆ. ನಾವು ಹೇಳಿದ್ದೇವೆ, ನಮ್ಮಲ್ಲಿ ಇಬ್ಬರು ಸರ್ವೆಯಲ್ಲಿ ಎಕ್ಸ್‌ಪರ್ಟ್‌ಗಳಿದ್ದಾರೆ mutually we have agreed for joint survey, why you depend on Government of India.. ಅಂತ ಹೇಳಿದ್ದೇವೆ. ಅವರಿಗೆ ಸರ್ವೆ ಬೇಕಾಗಿದೆ. ನಮಗೆ ಬೇಕಾಗಿಲ್ಲ, ಇದು ಸೆಟ್ಲ್ ಆಗಿರುವ ಇಷ್ಯೂಗಳು ಎಂದು ಹೇಳುತ್ತಿದ್ದೇವೆ. ನೀವು ಇಲ್ಲ ಎಂದು ಹೇಳುತ್ತಾ ಇರಬಹುದು, ಇದರಿಂದ ನನಗೆ ಅನುಮಾನ ಬರುತ್ತಿದೆ. ಏಕೆಂದರೆ ನಾವು ನೀವು ಬೇಕಾದರೆ ಒಂದು ಮೀಟಿಂಗ್ ಮಾಡೋಣ. ನಿಮ್ಮನ್ನೆಲ್ಲಾ ಕರೆಸುತ್ತೇನೆ, ನಾವು ನೀವು ಕುಳಿತುಕೊಂಡು ಮಾತನಾಡೋಣ. ಬ್ಯಾಕ್ ವಾಟರ್ ಪುಷ್ ಆಗುವುದನ್ನು ತಾವೇನಾದರೂ ಯೋಚನೆ ಮಾಡುತ್ತಿದ್ದೀರೋ ಏನೋ ನನಗೆ ಗೊತ್ತಿಲ್ಲ. ಬ್ಯಾಕ್ ವಾಟರ್ ವಿಲೇಜಸ್ ಹೇಳುತ್ತಿದ್ದೀರೋ ಏನೋ. ಸ್ಕೀಂ ಒಳಗಡೆ ಏನು ಬರುತ್ತದೆ ಅಂದರೆ ನೀರು ಸಬ್‌ಮರ್ಜ್ ಆಗುವುದು 314ಕ್ಕೆ ನಿಲ್ಲಬೇಕು, ಯಾವುದೇ ಕಾರಣಕ್ಕೆ ಅವರು 314.86ಕ್ಕಿಂತ ಮುಂದೆ ಹೋಗಕೂಡದು. ಅದನ್ನು ವೆರಿಫೈ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 3 ಫೀಟ್ ಎತ್ತರ ಮಾಡಿಸಿದ್ದೇ ಜಾಸ್ತಿ ನೀರು

ನಿಲ್ಲಿಸುವುದಕ್ಕೋಸ್ಕರ. ನ್ಯಾಚುರಲ್ಲಾಗಿ ಅಷ್ಟು ಬ್ಯಾಕ್ ವಾಟರ್ ಬಂದೇ ಬರುತ್ತದೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಯಡಿಯೂರಪ್ಪನವರು ಬೆಳಗ್ಗೆ ಒಂದು ಸಜೆಸ್ಟ್ ಮಾಡಿದರು. ಇಂಥ ಪ್ರಾಜೆಕ್ಟ್‌ಗಳಿಂದ ಎಲ್ಲಾ ಕಡೆ ಅನಾನುಕೂಲವಾಗಿದೆ ಆಲಮಟ್ಟಿ, ನಾರಾಯಣಪುರ ಸೇರಿದಂತೆ, ಬೇರೆ ಬೇರೆ ರಾಜ್ಯಗಳಲ್ಲಿ ಸೇರಿದಂತೆ ಭಾಕ್ರಾನಂಗಲ್ ಸೇರಿದಂತೆ ಅಲ್ಲೂ ಕೂಡ ಬ್ಯಾಕ್ ವಾಟರ್‌ಗೆ ಲಿಫ್ಟ್ ಇರಿಗೇಷನ್‌ಗೆ ಅವಕಾಶಗಳನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿ ನಾವು ನಮ್ಮ ರೈತರಿಗೆ ರಾಯಚೂರು ಭಾಗಗಳು ಏನು ಬರುತ್ತವೆ ಏನು ಎಕ್ಸ್‌ಟ್ರಾ ಉಪಯೋಗಿಸಿಕೊಂಡಿದ್ದಾರೆ ಅದನ್ನು ನಾವು ಲಿಫ್ಟ್ ಇರಿಗೇಷನ್‌ಗೆ ಕೊಡಿ ಎಂದು ಹೇಳಿ we will have to tell the Andhra Pradesh Government as well as CWC.. because they have violated the Bachawat Award.......... ಅದರಲ್ಲಿ ಮುಚ್ಚುಮರೆ ಏನಿದೆ? ಸ್ಟೇಟ್ ಇಂಟರೆಸ್ಟ್ ಕಾಪಾಡುವುದಕ್ಕೆ ಯಾರ ಮುಲಾಜೂ ನಮಗಿರುವುದಿಲ್ಲ. ನಾವು ಎಲ್ಲಿ ಉಪಾಯವಾಗಿ ಮಾಡಿಕೊಳ್ಳಬೇಕು, ಎಲ್ಲಿ ಯಾವ ರೀತಿ ಕೇಸ್ ಗೆಲ್ಲಬೇಕು ಎನ್ನತಕ್ಕದ್ದು ಬಿಟ್ಟರೆ ಬೇರೆ ಏನೂ ಇಲ್ಲ ಎನ್ನತಕ್ಕ ಮಾತನ್ನು ಹೇಳಿ ಪವರ್ ಪ್ರಾಜೆಕ್ಟ್‌ಗಳ ಬಗ್ಗೆ ಸ್ವಲ್ಪ ಕೇಳಿದ್ದಾರೆ. ಇದರಲ್ಲಿ ಒಟ್ಟು ಜನರೇಟ್ ಮಾಡುತ್ತಿರುವುದು 750 ಎಂ.ಯು. ಅಂದರೆ 210.4 ಮೆಗಾವ್ಯಾಟ್ಸ್.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 220 ಮೆಗಾವ್ಯಾಟ್ಸ್.

ಶ್ರೀ ಕೆ.ಎನ್.ನಾಗೇಗೌಡ:- 221 ಮೆಗಾವ್ಯಾಟ್ಸ್. 221 ಮೆಗಾವ್ಯಾಟ್ಸ್ ಬರುತ್ತದೆ. ಇಲ್ಲಿ ಏನಾಗಿದೆ ಎಂದರೆ ಅಪ್ರಾಕ್ಸಿಮೇಟಾಗಿ 770 ಕೋಟಿಗೆ ಎಸ್ಟಿಮೇಟ್ ಮಾಡಲಾಗಿದೆ. ಇಲ್ಲಿ, ಈ ಲೋಹೆಡ್ ಪವರ್ ಪ್ರಾಜೆಕ್ಟ್‌ನಲ್ಲಿ ಬಹಳ ಎಕ್ಸ್‌ಪೆನ್‌ಸೀವ್ ಅಂತ ಹೇಳಿ ಕಾಸ್ಟ್ ವ್ಯೂ ವರ್ಕ್ ಔಟ್ ಅಂತ ಇದೆ. 5 ರೂಪಾಯಿ 50 ಪೈಸೆಯನ್ನೋ ಏನೋ ಕೇಳುತ್ತಿದ್ದಾರೆ ಒಂದು ಯೂನಿಟ್‌ಗೆ ಅಂತ ನಮ್ಮ ಆಫೀಸರ್ಸ್ ಬೆಳಗ್ಗೆ ಹೇಳಿದ ಪ್ರಕಾರ. ಇದು ಲೋಹೆಡ್ ಪವರ್ ಆದ್ದರಿಂದ ಜಾಸ್ತಿ ಕೇಳುತ್ತಾರೆ. ಕಾಸ್ಟ್ ವರ್ಕ್‌ಔಟ್ ಮಾಡುವುದಕ್ಕೆ ಮಾತ್ರ ಉಳಿದುಕೊಂಡಿದೆಯೇ ವಿನಃ 50-50 ಪರ್ಸೆಂಟ್ ಷೇರು ನಾವು ಏನು ತೆಗೆದುಕೊಳ್ಳಬೇಕೋ ಅದರ ಬಗ್ಗೆ ಡಿಸ್ಪ್ಯೂಟ್ ಇಲ್ಲ. ಚಂದ್ರಬಾಬು ನಾಯ್ಡು ಅವರೂ ಕೂಡ ಇದನ್ನು ಅವರ ಕಾಗದದಲ್ಲಿ ಕ್ಲಾರಿಫೈ ಮಾಡಿದ್ದಾರೆ. ಆದ್ದರಿಂದ ಎರಡು ವಿಚಾರ ಇದೆ. ಬಚಾವತ್ ಅವಾರ್ಡ್ ವಯಲೇಟ್ ಮಾಡಿದ್ದಾರೆ ಎಂದು ಭಾರತ ಸರ್ಕಾರಕ್ಕೆ ಒಂದು ಬರೆಯೋಣ. ಎರಡನೆಯದು 21 ಕೋಟಿ ನಮಗೆ ಏನು ಕೊಡಬೇಕಾಗಿದೆ, ಅಂತಿಮವಾಗಿ 17 ಕೋಟಿ ರೂಪಾಯಿ ನಾವು ಏನು ಕೇಳುತ್ತಾ ಇದ್ದೇವೆ ಆ 17 ಕೋಟಿ ರೂಪಾಯಿಗಳ ಹಣವನ್ನೂ ಬಿಡುಗಡೆ ಮಾಡಬೇಕು ಎಂದು ಕೇಳೋಣ. ಮೂರನೆಯದು ಅವರು ಯಾವುದೇ ಕಾರಣಕ್ಕೆ 314ರ ಮೇಲೆ ನೀರು ಸ್ಟೋರ್ ಮಾಡಕೂಡದು. ಇದು ಅಗ್ರಿಮೆಂಟ್. ರೀಹ್ಯಾಬಲಿಟೇಷನ್ ಸ್ಕೀಂ ಪೂರ್ತಿ ಆಗುವವರೆಗೆ 314ರ ಮೇಲೆ ಮಾಡಕೂಡದು. ಅಲ್ಲಿಗೆ ತಿಳಿಸಬೇಕು ಅವರು. ಈ ಮೂರು

ನಾಲ್ಕು ಅಂಶಗಳ ಮೇಲೆ ನಾವು ಭಾರತ ಸರ್ಕಾರಕ್ಕೆ ಕಾಗದ ಬರೆಯುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನನಗೆ ಬೇಕಾಗಿರುವುದು ಒಂದೇ ಒಂದು ಅಂದರೆ ತಾವು ಕೊಟ್ಟ ಉತ್ತರ ಸಮಾಧಾನಕರವಾಗಿದೆ. ಹಿಂದೆ ಆದಂಥ ತಪ್ಪಿನ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಾನು ಒತ್ತಾಯ ಮಾಡುತ್ತಿರುವುದು ಕಳೆದ ಒಂದು ವರ್ಷದಿಂದ ಏನೋ ತಪ್ಪಾಗಿದೆ. ನಮ್ಮ ಅಧಿಕಾರಿಗಳು ಗಮನ ಕೊಡಲಿಲ್ಲ. ಮೂರು ಅಡಿ ಜಾಸ್ತಿ ಮಾಡಿಕೊಂಡಾಯಿತು. ಅಧಿಕಾರಿಗಳ ಜೊತೆ ಹೋಗಿ ಸ್ಥಳ ನೋಡಿ ನಾನು ವರದಿ ಕೊಟ್ಟಾಗ ಯಡಿಯೂರಪ್ಪನವರಿಗೆ ತಲೆ ಸರಿಯಿಲ್ಲ, ಏನೇನೋ ಮಾತನಾಡಿದರು ಎಂದು ಹೇಳುವವರೆಗೂ ಇಲ್ಲಿ ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ತೊಂದರೆಯಿಲ್ಲ. ಜನಕ್ಕೆ ಒಳ್ಳೆಯದಾಗುವುದಾದರೆ ನನ್ನ ಬಗ್ಗೆ ಯಾರು ಏನು ಹೇಳಿದರೂ ನಾನು ಚಿಂತೆ ಮಾಡುವುದಿಲ್ಲ. ನಾನು ನಿಮ್ಮನ್ನು ಕೇಳುವುದು ಕಳೆದ ಒಂದು ವರ್ಷದಿಂದ ಈ ಸದನದಲ್ಲಿ ಸರ್ಕಾರ ಆಶ್ವಾಸನೆ ಕೊಡುತ್ತಿದೆ. ಆಂಧ್ರ ಸರ್ಕಾರ ದುಡ್ಡು ಕೊಡುವುದು ಸ್ವಲ್ಪ ತಡವಾದರೂ ಪರ್ವಾಗಿಲ್ಲ, ರೋಡ್ ಮಾಡುವುದು, ಬ್ರಿಡ್ಜ್ ಮಾಡುವುದು, ಆ ಎರಡು ದೇವಸ್ಥಾನಗಳನ್ನು ಉಳಿಸಿಕೊಳ್ಳುವಂಥದ್ದು, ಕಾಂಪನ್‌ಸೇಷನ್ ಕೊಡುವುದು ಇದನ್ನು ನಾವು ಮಾಡಿಕೊಂಡು ಹೋಗುತ್ತೇವೆ ಎಂದು ಹೇಳಿದ್ದೀರಿ. ಇವತ್ತಲ್ಲ ನಾಳೆ ಆ ಒಂದು ಅಗ್ರಿಮೆಂಟ್ ಪ್ರಕಾರ ಕೊಡಬೇಕಾಗುತ್ತದೆ. ಕೆಲಸವನ್ನು ನೀವು ಈಗ ಶುರು ಮಾಡಿದರೆ ಮುಗಿಯಲು ಇನ್ನು ಆರು ತಿಂಗಳು ಬೇಕು. ಅದೆಲ್ಲಾ ಮುಳುಗಡೆಯಾಗಿ ಬಿಡುತ್ತದಲ್ಲ. ಆದ್ದರಿಂದ ಅದನ್ನು ಯಾವಾಗಿನಿಂದ ಶುರು ಮಾಡುತ್ತೀರಿ? ಇಲ್ಲಿ ಸದನದಲ್ಲಿ ಹಿಂದಿನ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದರು, ನಾನು ದುಡ್ಡಿಗೆ ಕಾಯುವುದಿಲ್ಲ, ನಾಳೆಯೇ ಡೈರೆಕ್ಷನ್ ಕೊಡುತ್ತೇನೆ, ಕೆಲಸ ಪ್ರಾರಂಭ ಮಾಡುತ್ತೇನೆ ಅಂತ ಹೇಳಿದ್ದರು.

ಶ್ರೀ ಕೆ.ಎನ್.ನಾಗೇಗೌಡ:- ಇಷ್ಟೇ ನಾನು ಪಾಯಿಂಟ್ ಹೇಳಿದ್ದು. 314ರ ಮೇಲೆ ನೀರು ಇಟ್ಟುಕೊಳ್ಳಬೇಕಾದರೆ ನಮ್ಮ ದುಡ್ಡನ್ನು ಕೊಟ್ಟು ಅವರು ನೀರು ಇಟ್ಟುಕೊಳ್ಳಬೇಕು, ಅಲ್ಲಿಯವರೆಗೂ ನಾವು 314ಕ್ಕಿಂತ ಹೆಚ್ಚು ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸ್ಪೆಸಿಫಿಕ್ಕಾಗಿ ಹೇಳಿದೆ ನಾನು. 318ಕ್ಕೆ ಹೋದರೆ ಪರಿಹಾರಗಳೆಲ್ಲಾ ಬರುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈಗಿರುವ ಮಟ್ಟಕ್ಕೇ ಜಮೀನು ಮುಳುಗಡೆಯಾಗುತ್ತದೆ. ಅವರಿಗೆ ಯಾವಾಗ ಕೊಡುತ್ತೀರಿ?

ಶ್ರೀ ಕೆ.ಎನ್.ನಾಗೇಗೌಡ:- ನಾವು ಸೀರಿಯಸ್ಸಾಗಿ ಆಕ್ಷನ್ ತೆಗೆದುಕೊಳ್ಳುತ್ತೇವೆ ಯಡಿಯೂರಪ್ಪನವರೇ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವಿಷ್ಟೇ ಪ್ರಶ್ನೆ ಕೇಳಿದ್ದುದು. ನಾವು ಕೇಳಿದ್ದುದು ಏನೆಂದರೆ ಈಗ 22 ಕೋಟಿ ರೂಪಾಯಿ ಅದರ ಎಸ್ಟಿಮೇಟ್ ಇದೆ. ಈಗ 25ನೇ ತಾರೀಖು ಅವರು ಉದ್ಘಾಟನೆ ಮಾಡಿ ನೀರು ನಿಲ್ಲಿಸಬೇಕು ಮತ್ತು ರೈಟ್ ಬ್ಯಾಂಕ್

ಕೆನಾಲ್ ಲೆಫ್ಟ್‌ಬ್ಯಾಂಕ್ ಕೆನಾಲ್ ಎರಡೂ ಪೂಜೆ ಮಾಡಿ ಪ್ರಾರಂಭ ಮಾಡಬೇಕು ಅಂತ ಮಾಡಿದ್ದಾರೆ. ಸಬ್‌ಮರ್ಜ್ ಆದಂಥ ಹಳ್ಳಿಗಳಿಗೆ ದುಡ್ಡಂತೂ ಕೊಡಬೇಕೇ? ರೋಡ್ ಮಾಡಬೇಕೇ? ರಿಹ್ಯಾಬಿಲಿಟೇಷನ್ ಪ್ರೋಗ್ರಾಂ ಮಾಡಬೇಕು. ನೀವು ಎಷ್ಟು ಖರ್ಚು ಮಾಡಿದ್ದೀರಿ ಎಂದು ಕೇಳುತ್ತಿದ್ದೇವೆ. ನೀವು ಫಿಗರ್ಸ್ ಕೊಡಲಿಲ್ಲ. ಅವರು ಹಣ ಕೊಡದಿದ್ದರೂ ಕೂಡ ನಿಮ್ಮ ಕರ್ತವ್ಯ ಏನೆಂದರೆ ಮುಳುಗಡೆ ಆಗಿರತಕ್ಕ ಹಳ್ಳಿಗಳಿಗೆ ಹಣ ಖರ್ಚು ಮಾಡಿ ಆಮೇಲೆ ನೀವು ಕ್ಲೈಮ್ ಮಾಡಿ.

ಶ್ರೀ ಕೆ.ಎನ್.ನಾಗೇಗೌಡ:- 314ಕ್ಕೆ ಕರ್ನಾಟಕದಲ್ಲಿ ಯಾವುದೂ ಮುಳುಗಡೆಯಾಗುವುದಿಲ್ಲ. ಸ್ವಲ್ಪ ವಿಚಾರವನ್ನು ಅರ್ಥ ಮಾಡಿಕೊಳ್ಳಲಿ ಅವರು. 314ಕ್ಕೆ ಸಬ್‌ಮರ್ಜ್ ಆಗುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹೀಗೆ ಹೇಳಿ ಹೇಳಿಯೇ ಮೂರು ಫೀಟ್ ಜಾಸ್ತಿಯಾಯಿತು. ಇಲ್ಲಿ ಈ ಸದನದಲ್ಲಿ ಹೋದಸಲ ರಾಯಚೂರಿಗೆ 1995ರಲ್ಲಿ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಮೀಟಿಂಗ್ ಮಾಡಿ ಸ್ಥಳದಲ್ಲೇ ಏನು ಹೇಳಿದರು ಅಂದರೆ ಒಂದು ವರ್ಷದಲ್ಲಿ ಕಂಪ್ಲೀಟ್ ಮಾಡುತ್ತೇನೆ ನಾನು ಆಂಧ್ರಪ್ರದೇಶದವರು ಹಣ ಕೊಡದಿದ್ದರೂ ಕೂಡ ರಾಜ್ಯ ಸರ್ಕಾರದಿಂದ ಹಣವನ್ನು ಖರ್ಚುಮಾಡಿ ರಸ್ತೆ ಆಗಲೀ, ಗುಡಿಗಳನ್ನು ಪ್ರೊಟೆಕ್ಷನ್ ಮಾಡತಕ್ಕದ್ದಾಗಲೀ ಮತ್ತು ಲ್ಯಾಂಡ್ ಕಾಂಪನ್‌ಸೇಷನ್ ಆಗಲೀ ಇವುಗಳನ್ನು ನಾವು ಕೊಡುತ್ತೇವೆ. ಆಮೇಲೆ ಆಂಧ್ರ ಸರ್ಕಾರದವರು ನಮಗೆ ಕೊಟ್ಟಿದ್ದ ಹಣ ಕೇವಲ ಒಂದು ಕೋಟಿ 47 ಲಕ್ಷ ರೂಪಾಯಿಗಳು ಮಾತ್ರ ಮತ್ತು 24 ಲಕ್ಷ ರೂಪಾಯಿಗಳನ್ನು ರೋಡ್ ಮತ್ತು ಬ್ರಿಡ್ಜ್‌ಗಳಿಗೆ ಕೊಟ್ಟಿದೆ. ಉಳಿದ ಹಣ ನಾವು ಕೊಡುತ್ತೇವೆ ಎಂದು ಹೇಳಿದಿರಿ. ಈಗ 21 ಕೋಟಿಯದಾಯಿತು. ಎಸ್ಟಿಮೇಟ್ ಬಂದ ಮೇಲೆ ನೀವು ಕೊನೆಯ ಪಕ್ಷ ನಾಲ್ಕು ಕೋಟಿ ಐದು ಕೋಟಿ, ಆರು ಕೋಟಿ ಏನಾದರೂ ಖರ್ಚು ಮಾಡಬೇಕಲ್ಲ? ನಾಳೆ ನೀರು ನಿಲ್ಲಿಸುತ್ತಾರೆ. 25ನೇ ತಾರೀಖು ಇನಾಗುರೇಷನ್ ಇದೆ. ಇದಕ್ಕೆ ಉತ್ತರ ಕೊಡುತ್ತಿಲ್ಲವಲ್ಲ ನೀವು. ನೀವು ಎಲ್ಲಿ ಫೈಲ್ ಆಗಿದ್ದೀರಿ ಒಂದು ವರ್ಷದಲ್ಲಿ ಮಾತು ಕೊಟ್ಟು ಅಷ್ಯೂರೆನ್ಸ್ ಕೊಟ್ಟು ಅದಕ್ಕೆ ಕೇಳುತ್ತಿದ್ದೇವೆ. ಅದಕ್ಕೆ ನೀವು ವಾರ್‌ಫುಟಿಂಗ್‌ನಲ್ಲಿ ಏನು ಕೆಲಸ ಮಾಡುತ್ತೀರಿ? ಒಂದು ಟಿ.ಎಂ.ಸಿ.ಯಂತೂ ನಮ್ಮ ತಪ್ಪಿನಿಂದ ನಿಮ್ಮ ತಪ್ಪಿನಿಂದ ಅದು ಆಯಿತು ಅಂತ ತಿಳಿದುಕೊಳ್ಳಿ. ಏಕೆಂದರೆ ಒಂದು ವರ್ಷದಲ್ಲೇ ಕಟ್ಟಿಕೊಂಡಿದ್ದು. ನಾವು ಹೇಳುವುದನ್ನೂ ನೀವು ಕೇಳಲಿಲ್ಲ. ಮಾಡಲ್ಲ ಅಂದಿರಿ. ಈಗ 314 ಮೀಟರ್ ಅಂತೀರಲ್ಲ ಈಗ 315 ಆಗುತ್ತದೆ. ಅಟೋಮೆಟಿಕ್ಕಾಗಿ 319ಕ್ಕೆ ಹೋದಮೇಲೆ ನಿಮ್ಮ ರಿಸರ್ವಾಯರ್ 315 ಆಗುತ್ತದೆ. ಫುಲ್ ರಿಸರ್ವಾಯರ್ 319 ಆಗಿದೆ ಎಂದು ನೀವೇ ಹೇಳಿದಿರಿ. ಅದಕ್ಕೆ ಸಬ್‌ಮರ್ಜ್ ಏರಿಯಾ ಬ್ಯಾಕ್ ವಾಟರ್ ಅಷ್ಟೇ ಜಾಸ್ತಿ ಬಂತು. ಇದು ಕ್ಲಿಯರ್ ಇದೆ. ನಾವೇನು ಪಾಲಿಟಿಕ್ಸ್ ಮಾಡುತ್ತಿದ್ದೇವಾ? ನೀವು ಕೊಟ್ಟಂಥ ಫಿಗರ್ಸ್ ನಾವು ಹೇಳುತ್ತಿದ್ದೇವೆ. ಇಲ್ಲಿ ಇರತಕ್ಕದ್ದು ಹೇಳುತ್ತಿದ್ದೇವೆ.

ಉಪಾಧ್ಯಕ್ಷರು:- ನೀರಾವರಿ ಮಂತ್ರಿಗಳೇ, ಬೇಗ ಮುಗಿಸಿರಿ.

ಶ್ರೀ ಜೆ.ಹೆಚ್.ಪಟೇಲ್:- ನೀವು ಕೇಳಿದ್ದುದು ಸರಿ. ಈಗ ಮುಳುಗಡೆಯಾದವರಿಗೆ ಏನು ಪರಿಹಾರ ಕೊಟ್ಟಿದ್ದಿರಿ, ಏನು ವ್ಯವಸ್ಥೆ ಮಾಡಿದ್ದೀರಿ ಎಂದು ಕೇಳಿದ್ದೀರಿ. ಮುಳುಗಡೆಯಾಗಿಲ್ಲ ಎಂದು ಮಂತ್ರಿಗಳು ಪುನಃ ಪುನಃ ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹಳೆಯ ಅಗ್ರಿಮೆಂಟ್ ಪ್ರಕಾರವೇ ಅಷ್ಟು ಮುಳುಗಡೆಯಾಗುತ್ತದೆ. ದೇವಸ್ಥಾನಗಳಿಗೆ ಧಕ್ಕೆ ಬರುತ್ತದೆ. ರೋಡ್ ಮಾಡಬೇಕು ಓಡಾಟ ಮಾಡುವುದಕ್ಕೆ. ಬ್ರಿಡ್ಜ್ ಆಗಬೇಕು.

ಶ್ರೀ ಕೆ.ಎನ್.ನಾಗೇಗೌಡ:- ಇಲ್ಲಿ ಎರಡು ಪ್ರೊಪೋಸಲ್ ಇದೆ. ಅದು ಮುಳುಗಡೆ ಮಾಡಬೇಕೇ, ಬ್ರಿಡ್ಜಸ್ ಮಾಡಬೇಕೇ, ಸಿಂಗಲ್ ಲೈನ್ ಮಾಡಬೇಕೇ, ಡಬ್ಬಲ್ ಲೈನ್ ಮಾಡಬೇಕೇ, ಯಾವುದು ಕಡಿಮೆ ವೆಚ್ಚವಾಗುತ್ತದೆ, ಯಾವುದು ಮಾಡಿದರೆ ರೈತರಿಗೆ ಸಹಾಯವಾಗುತ್ತದೆ ಇದರ ಬಗ್ಗೆ ಸ್ವಲ್ಪ ಪ್ರಾಬ್ಲಂ ಇರುವುದರಿಂದ..... ಎರಡು ಪ್ರೊಪೋಸಲ್ ಇದೆ. ಇದನ್ನು ವಿವರಿಸಿ ಹೇಳುತ್ತೇನೆ.

SRI M.MALLIKARJUNA KHARGE:- How much of money you have released?

ಶ್ರೀ ಕೆ.ಎನ್.ನಾಗೇಗೌಡ:- ನಮ್ಮ ಕರ್ನಾಟಕದ ಆ ಭಾಗದಲ್ಲಿರತಕ್ಕ ರೈತರ ರಕ್ಷಣೆ ಮಾಡುವುದಕ್ಕೆ ನಾವು ಎಲ್ಲ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಎಷ್ಟು ಹಣವನ್ನು ರಿಲೀಸ್ ಮಾಡಿದ್ದೀರಿ ಎನ್ನುವುದನ್ನು ಹೇಳುವುದಿಲ್ಲವಲ್ಲ. ಎಷ್ಟು ಹಣವನ್ನು ಇಲ್ಲಿಯವರೆಗೆ ಕೊಟ್ಟಿದ್ದೀರಿ? ನೀವು ಸದನದಲ್ಲಿ ಹೇಳಬೇಕು. ಒಂದು ಕೋಟಿ ಬಿಡುಗಡೆ ಮಾಡಿದ್ದೀರೋ? ಎರಡು ಕೋಟಿ ಬಿಡುಗಡೆ ಮಾಡಿದ್ದೀರೋ? ಮೂರು ಕೋಟಿ ಬಿಡುಗಡೆ ಮಾಡಿದ್ದೀರೋ? 21 ಕೋಟಿ ಕೇಳುವುದಕ್ಕೆ ನೀವು ಇಲ್ಲಿ ಏನಾದರೂ ಖರ್ಚು ಮಾಡಬೇಕಲ್ಲ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಕೊಟ್ಟಿರತಕ್ಕ ದುಡ್ಡನ್ನು ಇಟ್ಟುಕೊಂಡು ಕುಳಿತಿದ್ದೀರಿ. ಅದನ್ನು ಇಂದಿರಾ ವಿಕಾಸ ಪತ್ರ ತೆಗೆದುಕೊಂಡಿದ್ದರೆ ಅದು 10 ಕೋಟಿಯಾಗುತ್ತಿತ್ತು. ಕೊಟ್ಟು ದುಡ್ಡನ್ನು ಖರ್ಚುಮಾಡದೆ, ಇದು ಯಾವ ಹೊಸ ನ್ಯಾಯ? ಮಾನ್ಯ ಪಟೇಲರು ಮುಖ್ಯಮಂತ್ರಿಯಾಗಿ ಬಂದಮೇಲೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಜನರಿಗೆ ಕೊಡದೆ ಏನೂ ಹೇಳದಿದ್ದರೆ.....

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಕೇಳಿರಿ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಎರಡು ದೇವಸ್ಥಾನಗಳಿಗೆ

ಪ್ರೊಟೆಕ್ಟಿಂಗ್ ವಾಲ್ ಹಾಕಿದರೆ ಸಫಿಶಿಯೆಂಟ್ ಎನ್ನತಕ್ಕದ್ದು ಒಂದು ಥಿಂಕಿಂಗ್. ಇನ್ನೊಂದು ಸುತ್ತಾ ನೀರು ಬಂದು ಎಲಿವೇಟೆಡ್ ಪ್ಲೇಸ್‌ನಲ್ಲಿ ವಿಲೇಜ್ ಇರುವುದರಿಂದ ಐಲ್ಯಾಂಡ್‌ಗಳು ಆಗಿರುವುದರಿಂದ ಆ ವಿಲೇಜ್‌ಗಳನ್ನು ಪಕ್ಕಕ್ಕೆ ಏಕೆ ಹಾಕಬಾರದು ಎನ್ನತಕ್ಕದ್ದನ್ನು ಈಗಿನ ಜಿಲ್ಲಾಧಿಕಾರಿಗಳು ಸ್ವಲ್ಪ ಯೋಚನೆ ಮಾಡುತ್ತಿದ್ದಾರೆ. ಹಿಂದೆ ಇದ್ದಂತಹ ಚೀಫ್‌ಮಿನಿಸ್ಟರ್‌ರವರು ಇದರ ಬಗ್ಗೆ ಎರಡೂ ಅಭಿಪ್ರಾಯಗಳನ್ನು ಚರ್ಚೆ ಮಾಡಿದ್ದರಿಂದ ಆ ದುಡ್ಡನ್ನು ಹಾಗೆಯೇ ಇಟ್ಟುಕೊಂಡಿದ್ದೇವೆ. ಎಲ್ಲಿ ನೀರು ನಿಲ್ಲುತ್ತದೆ? It is not going to be submerged. ಅದಕ್ಕೆ ಅವರು ಹೇಳಿದ್ದಾರೆ ಜೂನ್ 1997ಕ್ಕೆ ಪೋಸ್ಟ್‌ಪೋನ್ ಮಾಡಿಯೆಂದು ಹೇಳಿ, ಮಾನ್ಯ ದೇವೇಗೌಡರು ಸೀರಿಯಸ್ಸಾಗಿ ಕಾಗದ ಬರೆದಿದ್ದಾರೆ. ನಾನು ತಿಳಿದಹಾಗೆ ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ. 314 ಮೇಲೆ ನೀರು ನಿಲ್ಲಿಸುವಂಥದ್ದು ಇಲ್ಲ. ನಾನು ಇವತ್ತೆ I will ask my Secretary to write. They should not go more than 314. ಎಂದು ನಾವು ಹೇಳಿದ್ದೇವೆ. If they go more than 314....

(INTERRUPTIONS)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ತಾವು ಆಗಸ್ಟ್‌ನಲ್ಲಿ ಪತ್ರ ಬರೆದಿದ್ದೀರಿ ಅಲ್ಲ ಅದಕ್ಕೆ ಅವರು ರೆಸ್ಪೆಕ್ಟ್ ಆಂಧ್ರದವರು ಕೊಟ್ಟರೇ?

ಶ್ರೀ ಕೆ.ಎನ್.ನಾಗೇಗೌಡ:- ಮಾಡಿದ್ದಾರೆ, ಬರೆದಿದ್ದಾರೆ.

SRI M.MALLIKHARJUNA KHARGE:- After six months you have written this. ನೀವು ಆಗಸ್ಟ್‌ನಲ್ಲಿ ಬರೆದಂತಹ ಲೆಟರ್‌ಗೆ ಅವರು ಮಾನ್ಯತೆಯನ್ನೇ ಕೊಡಲಿಲ್ಲ. ಪುನಃ ನೀವು ಏನು ಮಾಡಿದಿರಿ ರಿಟ್ರೀಟ್ ಮಾಡಿ ಜನವರಿಯಲ್ಲಿ ಬರೆದಿರಿ. ಅಂದರೆ ಆರು ತಿಂಗಳಿನಲ್ಲಿ ಅವರು ಕೆಲಸ ಮಾಡಿಕೊಳ್ಳುತ್ತಾ ಹೋದರು, ನೀವು ಪತ್ರ ಬರೆದುಕೊಳ್ಳುತ್ತಾ ಹೋದಿರಿ.

ಶ್ರೀ ಕೆ.ಎನ್.ನಾಗೇಗೌಡ:- ಇಲ್ಲ, ಡಿಸೆಂಬರ್‌ನಲ್ಲಿ ಸೆಕ್ರೆಟರಿ ಲೆವೆಲ್‌ನಲ್ಲಿ ಮೀಟಿಂಗ್ ಆಗಿದೆ. ಇಂಜಿನಿಯರ್ಸ್ ಲೆವೆಲ್‌ನಲ್ಲಿ ಮೀಟಿಂಗ್ ಆಗಿದೆ. ಚೀಫ್ ಸೆಕ್ರೆಟರೀಸ್ ಲೆವೆಲ್‌ನಲ್ಲಿ ಮೀಟಿಂಗ್ ಆಗಿದೆ. ಚೀಫ್ ಮಿನಿಸ್ಟರ್ಸ್ ಲೆವೆಲ್‌ನಲ್ಲಿ ಮೀಟಿಂಗ್ ಆಗಿದೆ. ಸರ್ವಪಕ್ಷಗಳ ಮೀಟಿಂಗ್ ಆದಮೇಲೆ, ನಾಲ್ಕು ಹಂತದಲ್ಲಿ ಮೀಟಿಂಗ್ ಆಗಿದೆ. ಎಲ್ಲೂ ಸಹ ಎಡವಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಇವತ್ತು ಚರ್ಚೆ ಮಾಡಿದ ಉದ್ದೇಶವೇನು? ಎರಡೇ ಎರಡು ಪರಿಹಾರಕ್ಕೆ. ಒಂದು ಮೂರು ಅಥವಾ ನಾಲ್ಕು ಅಡಿ ಎತ್ತರ ಮಾಡಿರುವುದರಿಂದ ಆ ನೀರನ್ನು ಲಿಫ್ಟ್ ಇರಿಗೇಷನ್ ಮೂಲಕ ಬ್ಯಾಕ್‌ವಾಟರ್‌ನನ್ನು ತೆಗೆದುಕೊಳ್ಳುವುದರ ಮೂಲಕ ಕರೆಸ್ಪಾಂಡೆನ್ಸ್ ಮಾಡಿ ನಾವು ಯಶಸ್ವಿಯಾಗುವುದರ ಕಡೆಗೆ ಗಮನಕೊಡಬೇಕು. ಎರಡನೆಯದು ಇವತ್ತಲ್ಲ ನಾಳೆ ಅದೇ ಮಟ್ಟಕ್ಕೆ ನೀರು

ನಿಲ್ಲಿಸಿಕೊಳ್ಳುತ್ತಾರೆ ಎನ್ನುವಂತಹ ಭಾವನೆಯನ್ನು ಇಟ್ಟುಕೊಂಡು, ಎಷ್ಟು ಜಮೀನು ಮುಳುಗಡೆಯಾಗುತ್ತದೆ ಮತ್ತು ಎರಡು ಪವಿತ್ರವಾದ ತೀರ್ಥ ಕ್ಷೇತ್ರಗಳನ್ನು ಉಳಿಸಿಕೊಳ್ಳುವುದಕ್ಕೆ ನೀವು ಕೆಲಸ ಪ್ರಾರಂಭ ಮಾಡಬೇಕು. ಈಗ ಮುಳುಗಡೆಯಾಗುವಂತಹ 550 ಅಥವಾ 560 ಅಷ್ಟಕ್ಕೆ ನೀವು ಪರಿಹಾರವನ್ನು ಕೊಡಿ. ಮಾನ್ಯ ಖರ್ಗೆಯವರು ನಾನು ಹೇಳಿದಂತಹ 2500ಕ್ಕೆ ಆಮೇಲೆ ಕೊಡುವಿರಂತೆ. ಈಗಾಗಲೇ ಅಂದಾಜು ಆಗಿರುವ ಬಡವನಿಗೆ ತಕ್ಷಣ ಪರಿಹಾರ ಕೊಡಬೇಕು. ಅವನು ಬೀದಿ ಪಾಲಾಗುತ್ತಾನೆ. ದೇವಸ್ಥಾನ ಉಳಿಸಿಕೊಳ್ಳಲಿಕ್ಕೆ ನೀವು ಒಂದು ಅಡ್ಡಗೋಡೆ ಕಟ್ಟುವುದೋ ಮತ್ತೊಂದೋ ಮಾಡಬೇಕು. ಈ ಪ್ರಾಜೆಕ್ಟ್ ಶುರುಮಾಡಿ 18 ವರ್ಷಗಳಾಯಿತು. ಪ್ರಾಜೆಕ್ಟ್ ಮಾಡಿದಿರಿ 500 ಕೋಟಿ ಖರ್ಚು ಮಾಡಿ. ಅವರು ಕೊಟ್ಟ ದುಡ್ಡಿನಲ್ಲಿ ಅಡ್ಡ ಗೋಡೆ ಕಟ್ಟುವುದಿಲ್ಲ, ರೋಡ್ ಮಾಡುವುದಿಲ್ಲ ಬ್ರಿಡ್ಜ್ ಮಾಡುವುದಿಲ್ಲವೆಂದರೆ ಹೇಗೆ?

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಎರೆಡು ವಿಚಾರಗಳಿವೆ. ಒಂದು ಬ್ಯಾಕ್‌ವಾಟರ್‌ನಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ನೀವು ಕರೆಸ್ಪಾಂಡೆನ್ಸ್ ಮಾಡಿಯೆಂದು ಹೇಳಿದ್ದಾರೆ. ನಾನೇ ಸಲಹೆ ಮಾಡಿದ್ದೇನೆ, ಖಂಡಿತವಾಗಲೂ ಅದರ ಬಗ್ಗೆ ಕರೆಸ್ಪಾಂಡೆನ್ಸ್ ಮಾಡುತ್ತೇವೆ. ಎರಡನೆಯ ವಿಚಾರ ಅವರು ಹೇಳಿರತಕ್ಕದ್ದು ಅಲ್ಲೊಂದು ಸಮಾಧಿ ಇದೆಯಂತೆ, ಪಕ್ಕದಲ್ಲೊಂದು ದೇವಸ್ಥಾನ ಇದೆಯಂತೆ, ಹೋದಸಾರಿ ನಮ್ಮ ಇಂಜಿನಿಯರಿಂಗ್ ಚೀಫ್ ಕಳುಹಿಸಿದ್ದೆವು ಅವರ ಹೆಸರು ರಾಜಾರಾವ್ ಅಂತ. ಅವರನ್ನು ಕಳುಹಿಸಿ ಕೊಟ್ಟಿದ್ದೆವು ಅವರ ಜೊತೆಯಲ್ಲಿ ನಮ್ಮ ಇಲಾಖೆಯ ಕಾರ್ಯದರ್ಶಿಯವರಾದ ಪೂಚಗಟ್ಟಿ ಅವರೆಲ್ಲ ಹೋಗಿದ್ದರು. ಅವರ ಹತ್ತಿರ ಜನ ಅರ್ಜಿ ಕೊಟ್ಟಿದ್ದಾರೆ. ನಮ್ಮ ದೇವಸ್ಥಾನವನ್ನೇ ಶಿಫ್ಟ್ ಮಾಡಿ ಕೊಡಿಯೆಂದು ಅರ್ಜಿ ಕೊಟ್ಟಿರತಕ್ಕವರು ಇದ್ದಾರೆ. ಆದ್ದರಿಂದ ಇದಕ್ಕೆ ನನಗೆ ಸ್ವಲ್ಪ ಕಾಲಾವಕಾಶ ಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ದೇವಸ್ಥಾನಕ್ಕಿಂತ ನೀವು ಮೊದಲು ಜನರಿಗೆ ಅನುಕೂಲವಾಗುವಂತಹ ತೀರ್ಮಾನ ತೆಗೆದುಕೊಳ್ಳಿ. ಆಮೇಲೆ ನೋಡೋಣ. ನೀವು ಏನಾದರೂ ಮಾಡಿ ಮೊದಲು ಜನರಿಗೆ ಕಾಂಪನ್‌ಸೇಷನ್ ಕೊಡಿಸಿ.

ಶ್ರೀ ಕೆ.ಎನ್.ನಾಗೇಗೌಡ:- ಸಾರ್ ಒಂದು ಮಾಡುತ್ತೇನೆ, ರಿಗಾರ್ಡಿಂಗ್ ರಿಹ್ಯಾಬಿಲಿಟೇಷನ್ ಇನ್ನು ಎರಡು ಮೂರು ದಿವಸಗಳಲ್ಲಿ ಸರ್ವಪಕ್ಷಗಳ ನಾಯಕರನ್ನು ನಮ್ಮ ಇಲಾಖೆಯ ಅಧಿಕಾರಿಗಳನ್ನು ಶನಿವಾರದೊಳಗೆ ಜಿಲ್ಲಾಧಿಕಾರಿಗಳನ್ನು ಕರೆಸಿ ಮೀಟಿಂಗ್ ಕರೆಸುತ್ತೇವೆ. ನಮ್ಮ ಆಫೀಸಿನಲ್ಲೆ ಕರೆಯುತ್ತೇವೆ I will invite all party leaders; ಅವರು ಯಾವ ಪ್ರಪೋಸಲ್ಸ್ ಕೊಡುತ್ತಾರೆ ಆ ಪ್ರಪೋಸಲ್ಸ್‌ನೆಲ್ಲ ಒಂದು ಕಂಬೈನ್ಡ್ ಮಾಡಿ We will send it.

ಉಪಾಧ್ಯಕ್ಷರು:- ಈಗ ಸದನವನ್ನು ಮುಂದೂಡಿ ಪುನಃ ಸದನ 4 ಗಂಟೆಗೆ ಸೇರುವುದು.